


## ಹಿಂದಣ ಹೆಜ್ಜೆಯ ಅರಿವು

ಕನ್ನಡ ನುಡಿಪರಂಪರೆಯನ್ನು ತಮ್ಮ ಅನುಭಾವದ ಮುಖೇನ ಬೆಳಗಿದ ದಾರ್ಶನಿಕರಲ್ಲಿ ಅಲ್ಲಮ ಇತ್ತ ಅರಿವು ಮಹತ್ತರವಾದುದು. 'ಹಿಂದಣ ಹೆಜ್ಜೆಯ ಕಂಡಲ್ಲದೆ ನಿಂದ ಹೆಜ್ಜೆಯನರಿಯಬಾರದು...' ಎಂಬ ಅಲ್ಲಮನುಡಿಯು ಇಂದಿನ ಹೆಜ್ಜೆಯನ್ನು ಸಮರ್ಥವಾಗಿ ಇಡಬೇಕಾದರೆ ಹಿಂದಣ ಹೆಜ್ಜೆಗಳನ್ನು ಸೂಕ್ಷ್ಮವಾಗಿ ಅರಿಯುವುದು ಅತ್ಯಗತ್ಯ ಎಂಬುದನ್ನು ಪ್ರತಿಧ್ವನಿಸುತ್ತದೆ. ಗ್ರಾಮಲೋಕದ ಆನುಭಾವಿಕ ಜಾನಪದರು 'ಹಿಂದ್ಕು ಮುಂದ್ಕು ನೋಡ್ಕಂಡು ಸರೀಗ ನಡಿ' ಎಂದಿರುವ ನುಡಿಯೂ ಇವತ್ತಿನವರಲ್ಲಿ ಬೆಳಗಬೇಕಾದ ಅವತ್ತಿನವರ ತಿಳಿವನ್ನೇ ಸೂಚಿಸುತ್ತದೆ. ಇಂಥ ನುಡಿಬೆಳಗು ನಮ್ಮ ಬದುಕಿಗೆ ಮಾತ್ರವಲ್ಲದೇ, ಬೌದ್ಧಿಕ ನಡೆಗೂ ಮಾರ್ಗದರ್ಶಕವಾಗಿದೆ. ಕನ್ನಡ ಸಂಶೋಧನ ಚರಿತ್ರೆಯಲ್ಲಿ ವಿದ್ವನ್ಮಣಿಗಳಾಗಿ ಬೆಳಗಿದ ಹಿಂದಣ ಸಂಶೋಧಕ ಸಾಲುದೀಪಗಳನ್ನು ಇಂದಿನ–ಹೊಸತಲೆಮಾರಿನ ಸಂಶೋಧಕರು ತಮ್ಮೊಳಗೆ ಅಂತಸ್ಥ ಮಾಡಿಕೊಂಡು ಸಾಗಬೇಕಿದೆ. ಹಿಂದಿನ ಸಂಶೋಧನ ಮಹಾಶಯರು ಸಾಗಿಬಂದಿರುವ ಹಾದಿಯೊಳಗೆ ಕಾಣುವ ನುಡಿಬದ್ಧತೆ, ಪ್ರಬುದ್ಧತೆ, ಪ್ರಖರ ಪಾಂಡಿತ್ಯ, ಶೋಧನಶಿಸ್ತು, ಸಂಯಮ, ಬಹುಶಿಸ್ತೀಯ ತಿಳಿವು, ಅವಿರತ ಕ್ಷೇತ್ರಕಾರ್ಯ, ತರ್ಕಬದ್ಧ ನಿರೂಪಣೆ, ಆರೋಗ್ಯಪೂರ್ಣ ಸಂವಾದ, ತಪ್ಪು–ಒಪ್ಪುಗಳ ವಿನಯಪೂರ್ಣ ಸ್ವೀಕಾರ ಮೊದಲಾದ ಗುಣಗಳು ವರ್ತಮಾನದ ಸಂಶೋಧಕರಿಗೆ ಮಾದರಿಯಾಗಿವೆ. ಹೀಗಾಗಿ ಹಿರಿಯರ ಇಂಥ ಮಹಾಮಾರ್ಗವನ್ನು ನಮ್ಮ ಕಾಲದ ಸಂಶೋಧಕರು ಅರಿಯುವ ಮೂಲಕ ತಮ್ಮ ಸಂಶೋಧನ ಮಾರ್ಗವನ್ನು ಬೆಳಗಿಕೊಳ್ಳುವಂತಾಗಲಿ ಎಂಬ ಮಹದಾಶಯದಲ್ಲಿ "ಹಿಂದಣ ಹೆಜ್ಜೆಯ ಅರಿವು" ಎಂಬ ಕಾಲಂ ಆರಂಭಿಸಲಾಗಿದೆ. ಕನ್ನಡ ಸಂಶೋಧನ ಚರಿತ್ರೆಯಲ್ಲಿ ಜಾನಪದ, ಹಳಗನ್ನಡ, ನಡುಗನ್ನಡ, ಹೊಸಗನ್ನಡ, ವ್ಯಾಕರಣ, ನಿಘಂಟು, ಛಂದಸ್ಸು, ಭಾಷಾವಿಜ್ಞಾನ, ಕಾವ್ಯಮೀಮಾಂಸೆ ಮೊದಲಾದ ಕ್ಷೇತ್ರಗಳಲ್ಲಿ ಹಿರಿಯ ಸಂಶೋಧಕರು ಮೂಡಿಸಿರುವ ಗುರುತರವಾದ ಹೆಜ್ಜೆಗಳನ್ನು ಅರಿಯುವ ನಿಟ್ಟಿನಲ್ಲಿ ಪ್ರತೀ ತಿಂಗಳು ಪ್ರಾತಿನಿಧಿಕ ಸಂಶೋಧನ ಲೇಖನವೊಂದನ್ನು ಇಲ್ಲಿ ನೀಡಲಾಗುವುದು. ಕನ್ನಡ ಸಂಶೋಧನಯಾನದ ಹಿಂದಣ ಹೆಜ್ಜೆಯ ಅರಿತು ಇಂದಿನ ಹೆಜ್ಜೆಯು ದೀಪ್ತಗೊಳ್ಳಲಿ ಎಂಬ ಆಶಯ ನಮ್ಮದು.

# ಶೂನ್ಯ ಸಂಪಾದನೆಯ ಮೂಲ ಮತ್ತು ಸ್ವರೂಪ.

ಎಲ್. ಬಸವರಾಜು

Article Link: https://aksharasurya.com/2023/11/l-basavaraju/

**ಆಶಯ:**

ಡಾ. ಎಲ್. ಬಸವರಾಜು ಅವರು ಕನ್ನಡ ವಿದ್ವತ್‌ಲೋಕದಲ್ಲಿ "ಆದಿಕವಿ ಪಂಪನ ಮರಿದುಂಬಿ" (ಚಿಂತಕ ವಿ. ಚಂದ್ರಶೇಖರ ನಂಗಲಿಯವರ ನುಡಿ) ಎಂಬ ಪ್ರಶಂಸೆಗೆ ಪಾತ್ರರಾದವರು. ಇದು ಅವರ ಸಂಶೋಧನ ಕಾಯಕದೊಳಗೆ ಅಡಗಿರುವ ಸಹಜವಾದ ಕವಿ ಹೃದಯವನ್ನು ಧ್ವನಿಸುತ್ತದೆ. ಇಂತಹ ಸ್ವೋಪಜ್ಞ ವಿದ್ವಾಂಸರು ಜನಿಸಿದ್ದು ಕೋಲಾರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನ ಇಡಗೂರಿನಲ್ಲಿ 1919ರ ಅಕ್ಟೋಬರ್ 5ರಂದು. ಬಡತನ ಹಾಗೂ ಪರಿವ್ರಾಜಕ ಜೀವನಾನುಭವದಲ್ಲಿ ಸಾಗಿ, ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಪದವಿ ಹಾಗೂ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಶಿಕ್ಷಣ ಪಡೆದರು. ಆ ಕಾಲದ ಶ್ರೇಷ್ಠ ಪ್ರಾಧ್ಯಾಪಕರು, ಸಂಶೋಧನ ಕ್ಷೇತ್ರದ ದಿಗ್ಗಜರು, ಆದರ್ಶ ಬದುಕಿನ ಮಾದರಿಗಳೂ ಆಗಿದ್ದ ಕುವೆಂಪು, ಡಿ. ಎಲ್. ನರಸಿಂಹಾಚಾರ್, ತೀ. ನಂ. ಶ್ರೀಕಂಠಯ್ಯ ಮೊದಲಾದವರ ಮಾರ್ಗದರ್ಶನದಲ್ಲಿ. ಎಲ್.ಬಿ. ಅವರು ತಮ್ಮ ಶೈಕ್ಷಣಿಕ ಜೀವನ ಮತ್ತು ಮುಂದಿನ ಸಾಹಿತ್ಯ, ಸಂಶೋಧನ ಕೃಷಿಗೆ ಬೇಕಾದ ಭೂಮಿಕೆಯನ್ನು ಸಿದ್ಧಪಡಿಸಿಕೊಂಡರು. ಎಲ್.ಬಿ. ಅವರ 'ಅಲ್ಲಮನ ವಚನ ಚಂದ್ರಿಕೆ', 'ಶಿವದಾಸ ಗೀತಾಂಜಲಿ', 'ಶಿವಗಣಪ್ರಸಾದಿ ಮಹಾದೇವಯ್ಯನ ಶೂನ್ಯಸಂಪಾದನೆ' ಮೊದಲಾದ ಕೃತಿರತ್ನಗಳು ಕನ್ನಡ ಸಾರಸ್ವತಲೋಕಕ್ಕೆ ಸಂದ ಅಮೂಲ್ಯ ಕೊಡುಗೆಗಳಾಗಿವೆ.

ಕನ್ನಡ ಗ್ರಂಥಸಂಪಾದನೆ ಮತ್ತು ಸಂಶೋಧನೆಯ ಎರಡನೆ ಪ್ರಮುಖ ಕಾಲಘಟ್ಟದಲ್ಲಿ ಪ್ರೊ. ಎಲ್. ಬಸವರಾಜು ಅವರು ಸಾಹಿತ್ಯ ಕ್ಷೇತ್ರವನ್ನು ಪ್ರವೇಶ ಮಾಡಿದರು. ಆ ವೇಳೆಗಾಗಲೇ ಮೊದಲ ಕಾಲಘಟ್ಟದಲ್ಲಿ ಫ. ಗು.ಹಳಕಟ್ಟಿ, ಶಿ. ಶಿ. ಬಸವನಾಳ, ನಂದೀಮಠ, ಎಂ.ಆರ್.ಶ್ರೀ., ಕೆ. ಜಿ. ಕುಂದಣಗಾರ, ಗೋವಿಂದ ಪೈ ಮೊದಲಾದವರು ಸಂಶೋಧನೆಯಲ್ಲಿ ಒಂದು ಸುತ್ತು ಯಾತ್ರೆಯನ್ನು ಮುಗಿಸಿದ್ದರು; ಮಾತ್ರವಲ್ಲ ಸಂಶೋಧನೆಯ ಕ್ಷೇತ್ರದಲ್ಲಿ ಒಂದು ಮಿಂಚಿನ ರೇಖನ್ನು ಬರೆದಿದ್ದರು. ಈ ಹಾದಿಯಲ್ಲಿ ಬಹುದೂರ ನಡೆದ ಪ್ರೊ. ಎಲ್. ಬಸವರಾಜು ಅವರು ತಮ್ಮ ಕ್ಷೇತ್ರಕಾರ್ಯದುದ್ದಕ್ಕೂ ಕನ್ನಡದ ವಿವೇಕವನ್ನು ಮೂಲಭೂತವಾದ ಮತ್ತು ಕುಟಿಲ ರಾಜಕೀಯ ನೀತಿಯಿಂದ ಮುಕ್ತಗೊಳಿಸುವ ಮೂಲಕ ಜನಮುಖಿಯಾದದ್ದು ಈಗ ಇತಿಹಾಸ.

ಕನ್ನಡ ಗ್ರಂಥಸಂಪಾದನೆಗೆ ಡೆಮಾಕ್ರೆಟಿಕ್ ಆದ ಆಯಾಮವನ್ನು ನೀಡಿದವರಲ್ಲಿ ಪ್ರೊ. ಎಲ್.ಬಸವರಾಜು ಅವರು ಪ್ರಮುಖರು. ಯಾಕೆಂದರೆ ಗ್ರಂಥಸಂಪಾದನೆಯ

ಜೊತೆಜೊತೆಗೆ ಅಂಟಿಕೊಂಡಿದ್ದ ವ್ಯಕ್ತಿ, ಜಾತಿ, ಧರ್ಮ, ಭಾಷೆ, ಪ್ರದೇಶ, ಮತ, ರಾಜಕಾರಣ ಮೊದಲಾದ ಸೀಮೆಗಳನ್ನು ಮೀರುವ ಅವಕಾಶವನ್ನು 'ಸೀಮೆಯೊಳಗಿದ್ದು ಸೀಮಾತೀತ'ಗೊಳಿಸಿಕೊಳ್ಳುವ ನಡೆಯಾಗಿಸಿಕೊಂಡ ಅಪರೂಪದ ವಿದ್ವಾಂಸರಲ್ಲಿ ಎಲ್.ಬಿ. ಅವರದು ಗುರುತರವಾದ ಯಾನ. ಪ್ರೊ. ನಂಗಲಿಯವರು ನುಡಿದಂತೆ, "'ಕವಿರಾಜಮಾರ್ಗ'ವನ್ನು ಸಹೃದಯ ಸಮುದಾಯದ ಕನ್ನಡಿಯೆಂದೂ ಕೈದೀವಿಗೆಯೆಂದೂ ಪರಿಗಣಿಸಲಾಗಿದೆ ಇದಾದ ಮೇಲೆ ಒಂದು ಸಾವಿರ ವರ್ಷಗಳ ಅನಂತರ ಡಾ. ಎಲ್. ಬಸವರಾಜು ಅವರು ಒಬ್ಬಂಟಿಯಾಗಿ ನಿಃಶಬ್ದವಾಗಿ ನಡೆದ ಮೇಕೆ ಹಾದಿಯೇ ಇದೀಗ ತೇರೆಳೆವ ಹೆದ್ದಾರಿಯಾಗಿ ಪರಿಣಮಿಸಿದೆ. ಸಾಹಿತ್ಯ ಕ್ಷೇತ್ರದಲ್ಲಿ ಸಂಶೋಧಕರೆನಿಕೊಂಡವರು ತಂತಮ್ಮ ಜಾತಿಯ ಜಗದ್ಗುರುಗಳಂತೆ ಆಯಾ ಮತಗಳ ಮತಾಚಾರ್ಯರಂತೆ ಸಲ್ಲುತ್ತಾ, ಸುಳ್ಳು ಸೃಷ್ಟಿಗಳಿಂದ ಕೂಡಿದ ಬೂಸಲು ತತ್ತ್ವಗಳನ್ನು ಪ್ರಸಾರಮಾಡುತ್ತಿರುವುದು ಸಾಮಾನ್ಯ ಸಂಗತಿಯಾಗಿದೆ. ಆದ್ದ-ರಿಂದಲೇ, ನಮ್ಮ ಜಾತಿಪದ್ಧತಿಯ ಸಮಾಜದ ತದ್ರೂಪಿನಂತೆ ಸಂಶೋಧಕರು ಚಲಾವಣೆಯಾಗುತ್ತಾ ಜಾತೀಯ ಮತ್ತು ಮತೀಯ ಪೀಠಾಧೀಪತಿಗಳ ಪ್ರಭಾವಳಿಯಾಗಿ ಮೆರೆಯುತ್ತಿದ್ದಾರೆ. ಆದರೆ ಡಾ. ಎಲ್. ಬಸವರಾಜು ಅವರು ಈ ಜಾತಿ ಪದ್ಧತಿಯ ಸಮಾಜಕ್ಕೆ ಸಿಂಹಸ್ವಪ್ನವಾಗಿದ್ದುಕೊಂಡು ಜೈನ ಸಾಹಿತ್ಯ, ಶೈವ ಸಾಹಿತ್ಯ, ವೀರಶೈವ ಸಾಹಿತ್ಯ, ವೈದಿಕ ಸಾಹಿತ್ಯ, ಬೌದ್ಧ ಸಾಹಿತ್ಯವೆಂಬ ಸಂಕುಚಿತ ಸ್ಥಾವರಗಳಿಗೆ ಸಿಲುಕಿಕೊಳ್ಳದೆ, ಆ ಸ್ಥಾವರಗಳನ್ನು ತಮ್ಮ ಸತ್ಯಶುದ್ಧ ಕಾಯಕದಿಂದ ಜಂಗಮಗೊಳಿಸಿದ್ದಾರೆ. 'ಅಂದು ಕವಿರಾಜಮಾರ್ಗ ಇಂದು ಬಸವರಾಜಮಾರ್ಗ'..."

ವಚನೋತ್ತರ ಯುಗಮಾನದಲ್ಲಿ ಬಸವಾದಿ ಶಿವಶರಣ ಗಣದ ಪ್ರಸಾದವನ್ನೇ ಸೇವಿಸುವ ನಿಷ್ಠೆಯಿಂದ ಅನುಭವಿಯಾಗಿ ಹದಿನಾಲ್ಕನೆಯ ಶತಮಾನದಲ್ಲಿ ಜೀವಿಸಿದ್ದ ಶಿವಗಣಪ್ರಸಾದಿ ಮಹಾದೇವಯ್ಯನು ಹನ್ನೆರಡನೆಯ ಶತಮಾನದ ಬಸವಾದಿ ಶರಣರು ನಡೆಯಿಸಿದ ಅನುಭಾವ ಗೋಷ್ಠಿಯಲ್ಲಿನ ಚಿಂತನ-ಮಂಥನ ಸಂಪತ್ತಿಗೊಂದು 'ಸಂಪಾದನ ಕೃತಿಶಿಲ್ಪ'ವನ್ನು ನಿರ್ಮಿಸಿಕೊಟ್ಟು 'ಶೂನ್ಯಸಂಪಾದನಾ ಪರಂಪರೆ'ಗೆ ನಾಂದಿ ಹಾಡಿದ್ದಾನೆ. ಬುದ್ಧನ ಕಾಲವಾದ ನಾಲ್ಕು ನೂರು ವರ್ಷಗಳ ನಂತರದಲ್ಲಿ ಅವನ ನಾಲ್ಕು ನೂರು ಜನ ಶಿಷ್ಯರು ಬೌದ್ಧ ತತ್ತ್ವಸಂಹಿತೆಯ ವಿಚಾರಗಳನ್ನು ಸಂಗ್ರಹಿಸಿಕೊಟ್ಟಂತೆ, ಮೌಖಿ-ಕ ಪರಂಪರೆಯಲ್ಲಿದ್ದ ವೇದಗಳು ಕಾಲಾಂತರದಲ್ಲಿ ಸಂಗ್ರಹಿತಗೊಂಡು ಬರಹಕ್ಕೆ ಒಳಪಟ್ಟಂತೆ, ಬಸವಾದಿ ಶಿವಶರಣರ ಕಾಲದ ಎರಡು ನೂರು ವರ್ಷಗಳ ನಂತರದಲ್ಲಿ ಬಂದ ಮಹಾದೇವಯ್ಯ, ಅವರ ಅನುಭವ ಮಂಟಪದ ಆಧ್ಯಾತ್ಮಿಕ-ವೈಚಾರಿಕ-ತಾತ್ವಿಕ-ತಾರ್ಕಿಕ ವಿಚಾರಧಾರೆಗಳನ್ನು ಸಂಭಾಷಣೆಯ ರೂಪದಲ್ಲಿ ಸಂಗ್ರಹಿಸಿಕೊಟ್ಟದ್ದು ಭಾರತೀಯ ರಾಷ್ಟ್ರೀಯ ಲೋಕಕ್ಕೆ ವಿನೂತನ ಕಾಣಿಕೆ ಎಂಬುದು ವಿದ್ವಾಂಸರ ಅಭಿಮತವಾಗಿದೆ. ಹೀಗೆ, ಪ್ರಥಮ

ಶೂನ್ಯಸಂಪಾದನಕಾರನಾದ ಶಿವಗಣಪ್ರಸಾದಿ ಮಹಾದೇವಯ್ಯನ ಮಾರ್ಗದಲ್ಲಿ ಶರಣರ ಅಭಿವ್ಯಕ್ತಿಗಳಿಗೆ ಡೆಮಾಕ್ರಟಿಕ್ ಆದ ವಿಶ್ವಮಾನವತೆಯ ಆಯಾಮವನ್ನು 19–20ನೇ ಶತಮಾನಗಳ ಅಂತ್ಯಾದಿಗಳಲ್ಲಿ ನೀಡಿದ ಮಹತ್ವಪೂರ್ಣ ವಿದ್ವಾಂಸರು ಪ್ರೊ. ಎಲ್. ಬಸವರಾಜು ಅವರು. ಹೀಗಾಗಿ ವಚನ ಸಂಪಾದನೆಯ ಚ–ರಿತ್ರೆಯಲ್ಲಿ ಮಹಾದೇವಯ್ಯನ ಮಾರ್ಗವೆಂತೋ ಬಸವರಾಜಮಾರ್ಗವೂ ಮಹತ್ತರವಾದುದಾಗಿದೆ.

ಗ್ರಂಥಸಂಪಾದನಾ ಶಾಸ್ತ್ರಕ್ಕೆ ಹೀಗೆ ವಿಶ್ವಾತ್ಮಕವೂ ವೈಜ್ಞಾನಿಕ ಆದ ಅರ್ಥವಂತಿಕೆಯನ್ನು ದೊರಕಿಸಿಕೊಟ್ಟಿರುವ ವಿರಳ ವಿದ್ವಾಂಸರಲ್ಲಿ ಎಲ್.ಬಿ. ಅವರು ಅಗ್ರಮಾನ್ಯರು. ಅವರು ಸಾಧಿಸಿಕೊಂಡಿರುವ ಬಹುಶ್ರುತ ವ್ಯಕ್ತಿತ್ವವು ಗ್ರಂಥಸಂಪಾದನ ಕ್ರಿಯೆಯನ್ನು ಪ್ರಾಮಾಣಿಕ ಸಂಶೋಧನೆಯನ್ನಾಗಿ, ವಸ್ತುನಿಷ್ಠ ವಿಮರ್ಶೆಯನ್ನಾಗಿ, ಮೂಲಕೃತಿಕಾರನ ಸತ್ಯಪ್ರತಿಯನ್ನಾಗಿ ಬೆಳೆಯಿಸುತ್ತದೆ ಎಂಬುದಕ್ಕೆ ಶಿವಗಣಪ್ರಸಾದಿ ಮಹಾದೇವಯ್ಯನ 'ಪ್ರಭುದೇವರ ಶೂನ್ಯಸಂಪಾದನೆ' ಕೃತಿಯು ಜೀವಂತ ನಿದರ್ಶನವಾಗಿದೆ. ಎಲ್.ಬಿ. ಅವರು ಗುರ್ತಿಸುವಂತೆ, 1969ಕ್ಕೆ ಹಿಂದೆ 'ಶಿವಗಣಪ್ರಸಾದಿಯ ಪ್ರಭುದೇವರ ಶೂನ್ಯಸಂಪಾದನೆ'ಯನ್ನು ಕೇವಲ ಬೆರಳೆಣಿಕೆಯಷ್ಟು ವಿದ್ವಾಂಸರು ಓಲೆಯ ಅಥವಾ ಕಾಗದದ ಹಸ್ತಪ್ರತಿಗಳಲ್ಲಿದ್ದುದನ್ನು ಕೇಳಿದ್ದರು ಅಥವಾ ಕಂಡಿದ್ದರು ಮಾತ್ರ. ಪ್ರಚಲಿತವಿರುವ ಮಿಕ್ಕ ಎಲ್ಲಾ ಶೂನ್ಯಸಂಪಾದನೆಗಳಿಗೂ ಶಿವಗಣಪ್ರಸಾದಿಯ ಈ ಪ್ರಥಮ ಶೂನ್ಯಸಂಪಾದನೆಯೇ ಮೂಲ ಮತ್ತು ಮಾದರಿ. ಮತ್ತು ಲಿಂಗಧಾರಣೆಯಿಲ್ಲದೆಯೂ ಒಬ್ಬನು (ವೀರಶೈವ) ಶರಣನೆಂದು ಮಾನ್ಯನಾಗಬಲ್ಲನನ್ನು ವಂಥ ಒಂದು ಜಾತ್ಯತೀತ ಧೋರಣೆಯಿಂದ ಮಹಾದೇವಯ್ಯನ ಈ ಮೂಲ ಶೂನ್ಯಸಂಪಾದನೆ ವಿಶಿಷ್ಟವಾಗಿದೆ. ಸರ್ವಧರ್ಮ ಸಮನ್ವಯದ ಜೀವನ ಮಾಡು ಇಲ್ಲವೇ ಮಡಿ ಎನ್ನುವಂಥ ಈ ವೈಚಾರಿಕ ಕಾಲಕ್ಕೆ ಓದಲು ತಕ್ಕ ಧಾರ್ಮಿಕ ಪಠ್ಯಗಳಲ್ಲಿ ಈ ಶೂನ್ಯಸಂಪಾದನೆ ಅಗ್ರಗಣ್ಯವಾಗಿದೆ ಎಂದರೆ ವಾಸ್ತವವೇ ಹೊರತು ಅತಿಶಯೋಕ್ತಿಯೇನೂ ಆಗದು.

ಕನ್ನಡದಲ್ಲಿ ಇದುವರೆಗೂ ದೊರೆತಿರುವ ನಾಲ್ಕು ಶೂನ್ಯ ಸಂಪಾದನೆಗಳಲ್ಲಿ ಪ್ರಥಮ ಶೂನ್ಯಸಂಪಾದನೆ ಶಿವಗಣಪ್ರಸಾದಿ ಮಹಾದೇವಯ್ಯನವರ 'ಪ್ರಭುದೇವರ ಶೂನ್ಯಸಂಪಾದನೆ'. ಆದರೆ ಆಧುನಿಕ ಸಂದರ್ಭದಲ್ಲಿ ಶೂನ್ಯಸಂಪಾದನೆಗಳ ಪ್ರಕಟನೆಯ ಮೊದಲ ಪ್ರಯತ್ನ ಕೈಗೊಂಡವರು ಡಾ. ಫ. ಗು. ಹಳಕಟ್ಟಿ. ಶ್ರೀಯುತರು 1930ರಲ್ಲಿ ಗೂಳೂರು ಸಿದ್ಧವೀರನ ಶೂನ್ಯ ಸಂಪಾದನೆಯನ್ನು ಸಂಪಾದಿಸಿ ಪ್ರಕಟಿಸುವ ಮೂಲಕ ಈ ಅಪೂರ್ವ ಗ್ರಂಥಗಳ ಪ್ರಕಟಣೆಗೆ ನಾಂದಿ ಹಾಡಿದರು. ಅನಂತರ 1958ರಲ್ಲಿ ಪ್ರೊ. ಸಂ. ಶಿ. ಭೂಸನೂರಮಠ ಅವರು ಗೂಳೂರು ಸಿದ್ಧವೀರನ ಶೂನ್ಯ ಸಂಪಾದನೆಯನ್ನೇ ಆಧುನಿಕ ಗ್ರಂಥ ಸಂಪಾದನೆಯ ಹಿನ್ನೆಲೆಯಲ್ಲಿ ಪರಿಷ್ಕರಿಸಿ ಪ್ರಕಟಿಸಿದರಾದರೂ, ಪ್ರಥಮ ಶೂನ್ಯಸಂಪಾದನಾಕಾರನಾದ ಶಿವಗಣಪ್ರಸಾದಿ ಮಹಾದೇವಯ್ಯನ ಪ್ರಭುದೇವ

ಶೂನ್ಯಸಂಪಾದನೆಯ ಬೆಳಕು ಕಂಡಿರಲಿಲ್ಲ. ಐತಿಹಾಸಿಕ ಮಹತ್ವದ ಈ ಕೃತಿ ವಚನಸಾಹಿತ್ಯದ ಗಂಭೀರ ಅಧ್ಯಯನ ಮತ್ತು ಸಂಶೋಧನೆಯಲ್ಲಿ ನಿರತರಾಗಿದ್ದ ಪ್ರೊ. ಎಲ್. ಬಸವರಾಜು ಅವರ ವಿದ್ವತ್ಪ್ರಭೆಗೆ ಗೋಚರಿಸಿತು. ತತ್ಫಲವಾಗಿ 1969ರಲ್ಲಿ ಈ ಕೃತಿರತ್ನ ಬೆಳಕು ಕಾಣುವ ಯೋಗ ಒದಗಿ ಬಂದಿತು.

ವಚನವಾಙ್ಮಯದ ಸಂವೇದನೆಯ ಸೂಕ್ಷ್ಮಗಳನ್ನು ಅರಗಿಸಿಕೊಂಡ ಡಾ. ಎಲ್. ಬಸವರಾಜು ಅವರು ಮಹಾದೇವಯ್ಯನ (ಮೊದಲ) ಶೂನ್ಯಸಂಪಾದನೆಯನ್ನು ಶಾಸ್ತ್ರೀಯವಾಗಿ ಪರಿಷ್ಕರಿಸಿ ಅನುಬಂಧ–1ರಲ್ಲಿ ಹಲಗೆಯಾರ್ಯನ ಶೂನ್ಯಸಂಪಾದನೆಯ 'ನುಲಿಯ ಚಂದಯ್ಯಗಳ ಸಂಪಾದನೆ, ಅನುಬಂಧ–2 ಮತ್ತು 3ರಲ್ಲಿ ಕ್ರಮವಾಗಿ ಗುಮ್ಮಳಾಪುರದ ಸಿದ್ಧಲಿಂಗನ ಶೂನ್ಯಸಂಪಾದನೆಯಲ್ಲಿಯ ಆಯ್ದಕ್ಕಿ ಮಾರಯ್ಯಗಳ ಸಂಪಾದನೆ ಹಾಗೂ 'ಗೋರಕ್ಷ ಸಂಪಾದನೆ', ಅನುಬಂಧ–4 ಮತ್ತು 5ರಲ್ಲಿ ಕ್ರಮವಾಗಿ ಗೂಳೂರು ಸಿದ್ಧವೀರನ ಶೂನ್ಯಸಂಪಾದನೆಯಲ್ಲಿಯ 'ಮೋಳಿಗೆ ಮಾರಯ್ಯಗಳ ಸಂಪಾದನೆ' ಹಾಗೂ 'ಘಟ್ಟಿದಾಳ ಮುದ್ದಣ್ಣಗಳ ಸಂಪಾದನೆ'ಗಳನ್ನು ಕೊಟ್ಟಿದ್ದಾರೆ. ಅನುಬಂಧ 6ರಲ್ಲಿ ವಚನಗಳ ಅಕಾರಾದಿಯನ್ನು, ಅನುಬಂಧ–7ರಲ್ಲಿ ಅರ್ಥಕೋಶ ಮತ್ತು ಗಮನಾರ್ಹ ಪದಗಳನ್ನು ಕೊಟ್ಟಿದ್ದಾರೆ.

ಶಿವಶರಣರ ವಚನಗಳ ಅನುಭಾವ ಮತ್ತು ಅಭಿವ್ಯಕ್ತಿ ಎರಡೂ ಅನನ್ಯ! ಶೂನ್ಯ ಸಂಪಾದನೆಯ 'ಸೂತ್ರ'ದಲ್ಲಿ ವಚನಗಳನ್ನು ಸಂಯೋಜಿಸಿದ ಪರಿಯೂ ವಿಸ್ಮಯಕಾರಿಯೇ! ಮೊಟ್ಟಮೊದಲಿಗೆ ಶೂನ್ಯಸಂಪಾದನೆಯನ್ನು ರೂಪಿಸಿದವನು ಶಿವಗಣಪ್ರಸಾದಿ ಮಹಾದೇವಯ್ಯ. ಈ ಕೃತಿಯನ್ನು ಮತೀಯವಾಗಿ ತಮತಮಗೆ ತೋಚಿದಂತೆ ಹಲಗೆಯಾರ್ಯ–ಗುಮ್ಮಳಾಪುರದ ಸಿದ್ಧಲಿಂಗ–ಗೂಳೂರು ಸಿದ್ಧವೀರರು ಕಾಲಕಾಲಕ್ಕೆ ತಿದ್ದಿ ತಿದ್ದಿ, ಮೂರಾಗಿ ಮಾಡಿ, ತಮ್ಮದೆನಿಸಿಕೊಂಡರು. ವಿದ್ವಾಂಸರು ಗುರ್ತಿಸುವಂತೆ, 'ಧರ್ಮದ ಮಿಥ್ಯಾದೃಷ್ಟಿಗಳೇ ಸಾಹಿತ್ಯದ ಓದಿಗೆ ಅವಜ್ಞಕಾರಿಯಾಗಿವೆ' ಎಂದು ನಂಬಿರುವ ಎಲ್. ಬಸವರಾಜು ಅವರು ಮಠಾಚಾರ್ಯರ ಪ್ರಭಾವಳಿಯಲ್ಲಿ ಮುಚ್ಚಿಹೋಗಿದ್ದ ಶೂನ್ಯಸಂಪಾದನೆಯ ಪ್ರಥಮ ಆವೃತ್ತಿಯನ್ನು ಬಯಲಿಗಿಡುವುದರ ಮೂಲಕ ಕೆಂಡವನ್ನು ಗೆದ್ದಲು ತಿನ್ನುವುದಿಲ್ಲವೆಂಬುದನ್ನು ಮನಗಾಣಿಸಿದ್ದಾರೆ'.

ಪ್ರಸ್ತುತ ಗ್ರಂಥದ ಪರಿಷ್ಕೃತ ಆವೃತ್ತಿಯಲ್ಲಿ ಹೆಚ್ಚುವರಿಯಾಗಿ ಅನುಬಂಧ–7ರಲ್ಲಿ ನಾಲ್ಕು ಶೂನ್ಯ ಸಂಪಾದನೆಗಳ ವಚನಗಳ ಕ್ರಮಾಂಕವನ್ನು ಸಂಖ್ಯಾಶಾಸ್ತ್ರದ ಸ್ವರೂಪದಲ್ಲಿ ವಿನ್ಯಾಸಗೊಳಿಸಿಕೊಟ್ಟಿದ್ದಾರೆ. ಪ್ರೊ. ಎಲ್. ಬಸವರಾಜು ಅವರೇ ಹೇಳುವಂತೆ, 'ಈ ವಿನ್ಯಾಸದಿಂದ ಮೊದಲನೇ ಶೂನ್ಯ ಸಂಪಾದನಾಕಾರನಾದ ಶಿವಗಣ ಪ್ರಸಾದಿಯನ್ನು ಹಲಗೆಯದೇವ ಮುಂತಾದವರು ಎಷ್ಟು ಅನುಸ–ರಿಸಿರುವರು, ಎಲ್ಲಿ ಅವನನ್ನು ಬಿಟ್ಟು ಬೇರೆಯಾಗಿ ಮತ್ತೆ ಕೂಡಿಕೊಳ್ಳುವರು, ಯಾವ ಸನ್ನಿವೇಶಗಳ ಸ್ಥಳಾಂತರ ಮಾಡುವರು, ಯಾವ ವಚನಗಳನ್ನು ಬಿಡುವರು ಮತ್ತು ಎಷ್ಟು ವಚನಗಳನ್ನು ಹೆಚ್ಚಾಗಿ ಸೇರಿಸುವರು ಮುಂತಾದ ಅಂಶಗಳನ್ನು

ಒಂದೇ ನೋಟಕ್ಕೆ ತಿಳಿಯಲು ಸಾಧ್ಯವಾಗುವುದು'. ನಾಲ್ಕು ಕೃತಿಗಳಲ್ಲಿ ಬರುವ ಪ್ರತೀ ವಚನಗಳನ್ನು ಇಂಥದೊಂದು ವಿಸ್ತೃತವಾದ ಅಂಕಿ-ಅಂಶಗಳ ವಿನ್ಯಾಸಕ್ಕೆ ಒಳಪಡಿಸಿರುವುದು. ಈ ನಾಲ್ಕು ಕೃತಿಗಳ ಬಗೆಗಿನ ಅವರ ಸೂಕ್ಷ್ಮ ಮತ್ತು ಸಮಗ್ರ ದೃಷ್ಟಿಯನ್ನು ಸ್ಪಷ್ಟಪಡಿಸುತ್ತದೆ. ಆಳವೂ ಶ್ರದ್ಧಾಪೂರಕ ಮತ್ತು ಅನ್ವೇಷಣಾತ್ಮಕವಾದ ಅಧ್ಯಯನ-ಮನನ-ಚಿಂತನಗಳಿಂದ ಮಾತ್ರ ಇಂಥ ಪ್ರಯೋಗಶೀಲತೆ ಸಾಧ್ಯವಾಗುತ್ತದೆ. ಅಲ್ಲದೆ ಕನ್ನಡ ಸಂಶೋಧನೆಯಲ್ಲಿ ಸಂಖ್ಯಾಶಾಸ್ತ್ರವನ್ನೂ ಅನ್ವಯಿಸಿಕೊಳ್ಳುವ ಹೊಸ ಸಂಶೋಧನಾ ವಿಧಾನಕ್ಕೂ ಮಾರ್ಗದರ್ಶಿಯಾಗಿದೆ. ಈ ದಿಸೆಯಲ್ಲಿ ಪ್ರೊ. ಎಲ್.ಬಸವರಾಜು ಅವರ ಪರಿಶ್ರಮ, ಅಧ್ಯಯನಶೀಲತೆ, ವೈಧಾನಿಕತೆಗಳ ಸ್ವರೂಪ, ಗ್ರಂಥಸಂಪಾದನಾ ಪ್ರತಿಭೆ, ವಿದ್ವತ್ತು ಪ್ರಯೋಜನ ದೃಷ್ಟಿ ಮತ್ತು ಪ್ರಯೋಗಶೀಲತೆಗಳ ಅನನ್ಯತೆಯಿಂದಾಗಿ ಬಹುಮೌಲಿಕವಾದುದಾಗಿದೆ.

ಇದು ಒಂದು ಶೂನ್ಯಸಂಪಾದನೆಯ ಮೆಯ್‌ಗೆಡಲೀಯದೆ ಸಂಗ್ರಹಿಸಿದ ವಸ್ತು ಶರೀರ. ಇಂತಹ ಅನೇಕ ಶೂನ್ಯಸಂಪಾದನೆಗಳಿರುವುದು ಪ್ರಸಿದ್ಧವಾದ ವಿಷಯ. ಅವು ಸಂಖ್ಯೆಯಲ್ಲಿ ನಾಲ್ಕೋ ಐದೋ ಎಂಬುದು ವಿವಾದಾಸ್ಪದ. ಇದುವರೆಗೂ ಅಚ್ಚಿನಲ್ಲಿ ಬಂದಿರುವುದಂತೂ (ಈ ಪರಂಪರೆಯಲ್ಲಿ ಕೊನೆಯದಾದ) ಗೂಳೂರು ಸಿದ್ಧವೀರನ ಶೂನ್ಯಸಂಪಾದನೆಯೊಂದೇ.

ಈ ಧಾಟಿಯಿಂದ ಯಾರಿಗಾದರೂ ಶೂನ್ಯಸಂಪಾದನೆ ಎಂಬ ಹೆಸರಿನ ಗ್ರಂಥಗಳು ಸ್ವತಂತ್ರವಾಗಿ ಸಂಖ್ಯೆಯಲ್ಲಿ ನಾಲ್ಕು ಅಥವಾ ಐದು ಇವೆ-ವ್ಯಾಸಭಾರತ, ಪಂಪ ಭಾರತ, ರನ್ನಭಾರತ, ಕುಮಾರವ್ಯಾಸ ಭಾರತ, ಸಾಳ್ವಭಾರತ ಎಂಬಂತೆ ಎನಿಸುವುದು ಸಹಜ. ಆದರೆ ಇದು ವಾಸ್ತವವಾದುದಲ್ಲ; ಸಾದೃಶ್ಯದಿಂದಾದ ಅಪಪ್ರಥೆ. ಈ ಶೂನ್ಯಸಂಪಾದನೆಗಳ ಗದ್ಯ ಮತ್ತು ವಚನಘಟಿತವಾದ ಶಬ್ದಶ-ರೀರದಲ್ಲಿ ಸಮಾನಾಂಶ ವಿಸ್ಮಯಕಾರಿಯಾಗುವಷ್ಟು ಅಧಿಕವಾಗಿದೆ. ಇದಕ್ಕೆಲ್ಲ "ಮೂಲ"ವೆಂದರೆ ಶಿವಗಣ ಪ್ರಸಾದಿ ರಚಿಸಿದ ಪ್ರಭುದೇವರ ಶೂನ್ಯಸಂಪಾದನೆಯೆ. ಇದನ್ನೇ ಮುಂದೆ ಬಂದ ಶೂನ್ಯಸಂಪಾದನ(ಪರಿಷ್ಕರಣ)ಕಾರರು "ಅದಕ್ಕೂ ಇದಕ್ಕೂ ಎದಕ್ಕೂ" ಬಳಸಿಕೊಂಡು, ಅದರೊಳಕ್ಕೆ ಒಂದೆರಡೆಡೆಗಳಲ್ಲಿ ತಮ್ಮದೇ ಎಂಬುದನ್ನು ಬಹಳವೆಂದರೆ 1/3 ಭಾಗದಷ್ಟು ಸೇರಿಸಿರುವರು. ಹೀಗಾದ ಮೂರು ಪರಿಷ್ಕರಣಗಳನ್ನೇ ನಾವಿಂದು ಹಲಗೆಯದೇವರ ಶೂನ್ಯಸಂಪಾದನೆ, ಗುಮ್ಮಳಾಪುರದ ಸಿದ್ದಲಿಂಗನ ಶೂನ್ಯಸಂಪಾದನೆ ಮತ್ತು ಗೂಳೂರು ಸಿದ್ಧವೀರನ ಶೂನ್ಯಸಂಪಾದನೆ ಎಂದು ವ್ಯವಹರಿಸುತ್ತಿರುವುದು.

ಆ ಪರಿಷ್ಕರಣಗಳಲ್ಲಿ ಮೂಲಶೂನ್ಯಸಂಪಾದನೆಯಲ್ಲಿದ್ದ ಕಥೆಯ ಧಾಟಿಯೂ, ಪಾತ್ರಸ್ವರೂಪವೂ ಸ್ವಲ್ಪಾಂಶದಲ್ಲಿ ಪಲ್ಲಟವಾಗಿರುವುದೂ ನಿಜ. ಆದರೆ ಹಲಗೆಯಾರ್ಯ ಮುಂತಾದವರು ಹಾಗೆ ಮಾಡಿದುದರಲ್ಲಿ ಅವರಿಗೆ ಮೂಲ ಶೂನ್ಯಸಂಪಾದನೆಯನ್ನು ವಿಕೃತಗೊಳಿಸುವ ವಿಗ್ರಹಭೇದನವಿಕಾರವಾಗಲಿ, ರೂಪಾಂತರಿಸಿ ಅದನ್ನು ತಮ್ಮದೆಂಬಂತೆ ಮಾಡಿಕೊಳ್ಳುವ ಕಳ್ಳಬುದ್ಧಿಯಾಗಲಿ ಇರಲಿಲ್ಲ. ಮಹಾದೇವಯ್ಯನೇ ತಮಗೆಲ್ಲ ಮೂಲ ಎಂದು ಗೌರವದಿಂದ ಅವರು ಸ್ಮರಿಸಿರುವರು. ಅಷ್ಟೇ ಅಲ್ಲ! ಆ ಮಹಾದೇವಯ್ಯನ ಪ್ರಾರ್ಥನೆಯ ಪ್ರಕಾರವೇ ಅವರೆಲ್ಲ ಕಾಲದಿಂದ ಕಾಲಕ್ಕೆ ಅವನ ಶೂನ್ಯಸಂಪಾದನೆಯಲ್ಲಿ ವ್ಯತ್ಯಾಸಗಳನ್ನು ಮಾಡಿರುವರು:

"ಶಿವಗಣಪ್ರಸಾದಿ ಮಹಾದೇವಯ್ಯಗಳ ನಿರೂಪವಿಡಿದು ಹಲಗೆಯದೇವರು [ತಮ್ಮ ಶೂನ್ಯಸಂಪಾದನೆಯನ್ನು ರಚಿಸಿದರು" (K. A. 105, ಪು. 1)

["ಶಿವಗಣಪ್ರಸಾದಿ ಮಹಾದೇವಯ್ಯಗಳು ತಮ್ಮ ಶೂನ್ಯಸಂಪಾದನೆಯಲ್ಲಿ]ನ ವಚನ ಕ್ರಮ ತಪ್ಪಿದರೆ ನಿಮ್ಮ ಪರಿಜ್ಞಾನದಿಂದ ತಿದ್ದಿಕೊಂಬುದೆಂದು ಎನಲಾಗಿ–ಆ ವಾಕ್ಯವಿಡಿದು ಗುಮ್ಮಳಾಪುರದ ಸಿದ್ದಲಿಂಗದೇವರು, ಅಲ್ಲಿ ಸಿದ್ದರಾಮಯ್ಯದೇವ–ರಿಗೆ ದೀಕ್ಷಾಕ್ರಮವಿಲ್ಲದಿರಲು ಬಸವಾದಿ ಪ್ರಥಮರ ವಚನಪ್ರಸಿದ್ಧವಾಗಿ ಸೇರಿಸಿದರು. ಆ ಪರಿಯಲೆ... ಗೂಳೂರು ಸಿದ್ಧವೀರದೇವರೆಂಬ ದಿವ್ಯಜ್ಞಾನಾನುಭಾವಿಯು ಈ ಶೂನ್ಯಸಂಪಾದನೆಯಂ ರಚಿಸಿ[ದರು]." ("ಉ" ಪ್ರತಿ–ಪುಟ 422)

ನಿಜ, ಶಿವಗಣಪ್ರಸಾದಿ ಮಹಾದೇವಯ್ಯನು ತನ್ನ ಶೂನ್ಯಸಂಪಾದನೆಯ ಕೊನೆಗೆ "ಇಲ್ಲಿ ವಚನಕ್ರಮ ಸೇರುವ ತಪ್ಪುಳ್ಳಡೆ ನಿಮ್ಮ ಪರಮಜ್ಞಾನದಿಂ ತಿದ್ದಿ ಈ ವಚನಾನುಭಾವ ಪ್ರಸಂಗಮಂ ಮಾಡಿ ಸುಖಿಸುವುದು" ಎಂದು ಭವಿಷ್ಯತ್ತಿನ ಈ ಪ್ರಾಜ್ಞರನ್ನು ಕೋರಿದ್ದನು.

ಮಹಾದೇವಯ್ಯನಿಗಿಂತ ಹಿಂದೆ ಇಂತಹ ಸಂಪಾದನೆಯ ಗ್ರಂಥಗಳು ಇರಲಿಲ್ಲವೇ? ಇದು ಕ್ಲಿಷ್ಟವಾದ ಪ್ರಶ್ನೆ. ಈ ಸಂಪ್ರದಾಯಕ್ಕೆ ಇವನೇ ಪ್ರವರ್ತಕನೆನ್ನಲು ಇರುವ ಒಂದೇ ಒಂದು ಅಡ್ಡಿಯೆಂದರೆ – ನಾವು ಮುಂದೆ ಸಾಧಾರವಾಗಿ ಸಮರ್ಥಿಸುವಂತೆ ಕಡೆಯ ಪಕ್ಷ ಮಹಾದೇವಯ್ಯನ ಸಮಕಾಲದವನಾದರೂ (ಹಿಂದಿನ ಕಾಲದವನೆಂದರೂ ಸರಿಯೆ) ಆಗಿರಬಹುದಾದ ಸಿಂಗಿರಾಜನ ಬಸವಪುರಾಣದಲ್ಲಿ ಉಲ್ಲೇಖಿತವಾಗಿರುವ (2–16 ಗ, 2–40 ಗ) "ಪ್ರಭುಸಂಪಾದನೆ" ಮತ್ತು "ಕ್ರಿಯಾಸಂಪಾದನೆ" ಎಂಬವು ಸಂಪಾದನೆಯ ಸಂಪ್ರದಾಯದ ಸ್ವತಂತ್ರ ಗ್ರಂಥಗಳಂತೆ ತೋರುವವಲ್ಲದೆ, ಅವುಗಳಲ್ಲಿ ವಸ್ತುವೈವಿಧ್ಯವೂ ತೋರುವುದು. ಅವೆಲ್ಲ

ಮಹಾದೇವಯ್ಯನಿಗಿಂತ ಹಿಂದಿದ್ದ 'ಖಂಡ' ಸಂಪಾದನೆ(ಗ್ರಂಥ)ಗಳಿರಬಹುದು.

ಹೇಗೂ ಪಂಪನಿಗೆ ಪೂರ್ವದಲ್ಲಿ ಭಾರತದ ಒಂದೊಂದು ಉಪಾಖ್ಯಾನವನ್ನೇ ಕುರಿತ ಬಿಡಿ ಬಿಡಿ ಖಂಡಕಾವ್ಯಗಳೇ ಇದ್ದಂತೆ, ಮಹಾದೇವಯ್ಯನಿಗೆ ಪೂರ್ವದಲ್ಲಿ– ಪ್ರಭುಸಂಪಾದನೆ, ಕ್ರಿಯಾಸಂಪಾದನೆ ಎಂದು ಮುಂತಾಗಿ ಸಂಪಾದನೆಯ ಖಂಡಕೃತಿಗಳು ಮಾತ್ರ ಇದ್ದಿರಬಹುದು. ಆ ಪ್ರಕಾರಕ್ಕೆ ಒಂದು "ಸಮಸ್ತ" ರೂಪವನ್ನು ಕೊಡುವ ಬೃಹತ್ ಶಿಲ್ಪದ ಬಿನ್ನಾಣ ಸಂಗಡಿಸಿದುದು ಈ ಮಹಾದೇವಯ್ಯನಿಂದಲೇ ಎನ್ನಬಹುದು.

ಸಿಂಗಿರಾಜನ ಬಸವಪುರಾಣದಲ್ಲಿ ಉಲ್ಲೇಖಿತವಾಗಿರುವ 'ಪ್ರಭುಸಂಪಾದನೆ'ಯಲ್ಲಿ ಪ್ರಭುದೇವನಿಗೂ ಬಸವಣ್ಣನಿಗೂ ನಡೆದ ತಂತಮ್ಮ ಪೂರ್ವಭವಾವಳಿಯನ್ನು ಕುರಿತ ಸಂವಾದವಿದೆ. (ಇಲ್ಲಿ ಸಂವಾದ ಅಚ್ಚ ವಚನಗಳಲ್ಲಿ ನಡೆಯುವುದೇ ಹೊರತು, ಮುಂದಣ ಶೂನ್ಯಸಂಪಾದನೆಗಳಲ್ಲಿ ಕಾಣುವಂತೆ ಮಧ್ಯದ ಗದ್ಯದ ಕೊಂಡಿಯ ಮಾತುಗಳು ಕಂಡುಬರುವುದಿಲ್ಲ.) ಅದರ ಕೊನೆಗೆ ಅಲ್ಲಿಯವರೆಗೂ ನಡೆದ ಸಂವಾದದಲ್ಲಿನ ವಿಷಯದ ಸಮರ್ಥನೆಗಾಗಿ ಚೆನ್ನಬಸವಣ್ಣನ ಮೂರು ವಚನಗಳನ್ನೂ, ಒಂದು ಹಾಡನ್ನೂ "ಸಾಕ್ಷಿ" ಯೆಂದು ಸೇರಿಸಿದೆ. ಇದರಲ್ಲಿ ಶಿವಗಣಪ್ರಸಾದಿಯ ಶೂನ್ಯಸಂಪಾದನೆಯಲ್ಲಿ ಇಲ್ಲದ ವಚನಗಳಿವೆ. ಕೊನೆಯ ಹಾಡೂ ಶಿವಗಣಪ್ರಸಾದಿಯಲ್ಲಿಲ್ಲ. ಇದನ್ನೆಲ್ಲ ನೋಡಿದರೆ ಶಿವಗಣಪ್ರಸಾದಿಯ ಕಾಲಕ್ಕೆ ಪೂರ್ವದಲ್ಲಿದ್ದ ಖಂಡಸಂಪಾದನೆಗಳ ಪ್ರಾಕೃತರೂಪ ಗಮ್ಯವಾಗುವುದು. ಶಿವಗಣಪ್ರಸಾದಿಯು ಶರಣರ ವಚನಪುಷ್ಪಗಳನ್ನು ಶಿವಾನುಭಾವ ಸಂವಾದದ ಮಾಲೆಯಾಗಿ ಕಟ್ಟುವಲ್ಲಿ ತನ್ನದೇ ಆದ ಗದ್ಯಸೂತ್ರವನ್ನು ಬಂಧಕ್ಕಾಗಿ, ಆದರೂ ಬಂಧುರವಾಗಿ ತಂದು ಮೇಲುಕುಹಾಕಿದನು. ಇದು ಈ ಪ್ರಕಾರಕ್ಕೆ ಅವನಿಂದ ಸಂದ ಒಂದು ನವ್ಯಾಂಶ.

ಈ ನವ್ಯಾಂಶವನ್ನು ಒಂದೆಂದು ಪರಿಗಣಿಸಿದಾಕ್ಷಣಕ್ಕೇ, ಗಣಿತ ರೀತಿಯಿಂದ, ಕಡೆಗಣನೆ ಮಾಡಲಾಗದು. ಇವನ ಈ ನವೀನಾಂಶದ ಸೇರ್ಪಡೆಯಿಂದ ಅದುವರೆಗೂ ಕೇವಲ ವಚನರೂಪವಾಗಿದ್ದ ಸಂಪಾದನೆಯ ಕೃತಿಗಳು–ಗದ್ಯ ಮಿಶ್ರಣದಿಂದ–ಒಂದು ವಿಧವಾದ ಚಂಪೂಧೋರಣೆಯನ್ನು ಪಡೆಯಿತು. ಅನಾದಿಕಾಲದಿಂದಲೂ ಕನ್ನಡದ ಸಾಹಿತ್ಯಕ್ಷೇತ್ರದಲ್ಲಿ ಅದು ಶಿಷ್ಟಸ್ತರಕ್ಕೆ ಅನ್ವಯಿಸಲಿ, ಪಾಮರಸ್ತರಕ್ಕೆ ಅನ್ವಯಿಸಲಿ– ಕನ್ನಡಿಗರ ಉಸುರಿನ ಜಾಯಮಾನವೇ ಎನ್ನಬಹುದಾದ ಗದ್ಯ ಪದ್ಯ ಸಮವಾಯ ಸಮರುಚಿಯು–ಅದುವರೆಗೂ ತನಗೆ ಏಕಪ್ರಕಾರವಾಗಿ ಅಂಟಿಬಂದಿದ್ದ, ಆದುದ- ರಿಂದಲೇ ಜನಾದರಣೆಯನ್ನು ಕಳೆದುಕೊಂಡಿದ್ದ ವೃತ್ತಕಂದಗದ್ಯಾತ್ಮಕವಾದ ತನ್ನ

ಜರಠ ಕವಚವನ್ನು ಕಳಚಿ, ವಚನ–ಹಾಡು–ಗದ್ಯಾತ್ಮಕವಾದ ಸಪುರವಸ್ತ್ರವನ್ನು ಧರಿಸಿ ತನ್ನ ಧ್ರುವನಿರ್ಜರತರುಣದೇಹಲಾವಣ್ಯವನ್ನು ಪ್ರಕಟಗೊಳಿಸಿತು. ಹರಿಹರನಿಂದ ಒಂದು ರೀತಿಯಲ್ಲೂ, ಶಿವಗಣಪ್ರಸಾದಿಯಿಂದ ಮತ್ತೊಂದು ರೀತಿಯಲ್ಲೂ ಚಂಪೂಶೈಲಿಯು ಹೀಗೆ ಪಲ್ಲಟಗೊಂಡುದಕ್ಕೆ ಕಾರಣ ಶರಣರ ವಚನಸಾಹಿತ್ಯವು ವಿದ್ವಜ್ಜನರಲ್ಲೂ ಜನರಲ್ಲೂ ಬಳಕೆ ಒಡನಾಟಗಳನ್ನು ರೂಢಿಸಿ ಬೆಳೆಸಿದುದೇ ಇರಬೇಕು. ಜನಪದ ಸಾಹಿತ್ಯದಲ್ಲಿ ಇಂದಿಗೂ ನಾವು ಕಂಸಾಳೆಯ ಪದಗಳು ಮುಂತಾದೆಡೆಗಳಲ್ಲಿ ಚಂಪೂಶೈಲಿ ಜನಪ್ರಿಯವಾಗಿ ಒಗ್ಗಿನುಗ್ಗಿ ಬಂದಿರುವುದನ್ನು ಕಾಣಬಹುದು. ಯಕ್ಷಗಾನ ಬಯಲಾಟಗಳಲ್ಲಿಯಂತೂ ಇದು ಸನಾದವಾಗಿ ಕಣ್ಣಿಗೆ ಕಟ್ಟಿದೆ. ಇದರಿಂದ ಎಲ್ಲ ಅರ್ಥದಲ್ಲೂ "ಜನಪ್ರಿಯ"ವೆನ್ನಬಹುದಾದ ಚಂಪೂ ಒಂದಲ್ಲ ಒಂದು ಪ್ರಕಾರದಲ್ಲಿ ನಿರಂತರವಾಗಿ ನಮ್ಮ ಹೃದಯತಂತುವನ್ನು ಹಿಡಿದು ಮಿಡಿದೇ ಬಂದಿದೆ. ಕನ್ನಡದಲ್ಲಿ ಜೈನಪಂಡಿತರು ಚಂಪೂಪ್ರಕಾರವನ್ನು ಬರಡುಗೊಳಿಸಿ ಆರೂಡಿದ್ದಾಗ, ಅದಕ್ಕೆ ಶಿವಕವಿಗಳು ಅಡ್ಡ ಹಾರಿಸಿ ಹೊಸ ತಳಿಗಳನ್ನು ತಂದರು. ಇದಕ್ಕೊಂದು ಸಾಕ್ಷಿ ಮಹಾದೇವಯ್ಯನ ಶೂನ್ಯಸಂಪಾದನೆ.

**ಪ್ರಥಮ ಶೂನ್ಯಸಂಪಾದನೆಯ ಕಾಲವಿಚಾರ**

ಹನ್ನೆರಡನೇ ಶತಮಾನದ ಬಸವಾದಿಪ್ರಮಥರ ವಚನಗಳ (ಸಂಕಲನ ಮತ್ತು) ಸಂಯೋಜನಕಾರ್ಯಕ್ಷೇತ್ರವನ್ನು ನಾವು ನಾಲ್ಕು ಘಟ್ಟಗಳಲ್ಲಿ ವಿಂಗಡಿಸಬಹುದು. ತಮ್ಮ ಕಾವ್ಯದೊಳಕ್ಕೇ ವಚನಗಳನ್ನು ರಗಳೆಯಾಗಿಯೋ ಷಟ್ಪದಿಯಾಗಿಯೋ ತಿರುಗಿಸಿ ಸಂಗ್ರಹಿಸಿದ ಹರಿಹರ–ರಾಘವಾಂಕರ ಹದಿಮೂರನೇ ಶತಮಾನ ಮೊದಲನೆಯದು. ಈ ಘಟ್ಟದಲ್ಲೇ ಖಂಡಸಂಪಾದನೆಗಳು ಮೈವೆತ್ತಿರುವ ಸಂಭವ.

ಕ್ರಿ.ಶ. 1416–1446ರ ಅವಧಿಯ ಪ್ರೌಢದೇವರಾಯನ ದಂಡನಾಯಕನಾಗಿದ್ದ ಲಕ್ಕಣ್ಣದಂಡೇಶನಿಗೆ ಬಸವಣ್ಣನ ಕಥೆಯನ್ನು ಶಿವತತ್ವ ಚಿಂತಾಮಣಿಯಲ್ಲಿ ಸಂಗ್ರಹಿಸುವಲ್ಲಿ ಸಾಮಗ್ರಿಯನ್ನು ಒದಗಿಸಿದ ಅಮಲಬಸವಚಾರಿತ್ರ್ಯದ ಕರ್ತೃವಾದ ಸಿಂಗಿರಾಜನೂ,[1] ಆ ಸಿಂಗಿರಾಜನ ಅದೇ ಬಸವಚಾರಿತ್ರ್ಯದಿಂದ ತನ್ನ ಶೂನ್ಯಸಂಪಾದನೆಗೆ ಪ್ರಧಾನವಾಗಿ ಪ್ರಭುದೇವನ ಸಂಬಂಧವಾದ ಪೂರ್ವಕಥಾ ಮೃತ್ತಿಕೆಯನ್ನೂ,[2] ಗೌಣವಾಗಿ ಬಸವಣ್ಣನ ಸಂಬಂಧವಾದ ಪೂರ್ವ ಮತ್ತು ಸಂಪ್ರತಿಕಥಾಭಿತ್ತಿಯನ್ನೂ ಎತ್ತಿಕೊಂಡ ಶಿವಗಣಪ್ರಸಾದಿ ಮಹಾದೇವಯ್ಯನೂ ಇದ್ದ ಹದಿನಾಲ್ಕನೆಯ ಶತಮಾನ ಎರಡನೆಯದು. ಈ ಘಟ್ಟದಲ್ಲಿಯೇ ಸಿಂಗಿರಾಜನು ವಚನಗಳನ್ನು ತನ್ನ ಕಾವ್ಯದ ಛಂದಸ್ಸಿಗೆ ತಿರುಗಿಸಿಕೊಳ್ಳುವುದರ ಜೊತೆಗೆ, ಪ್ರತ್ಯೇಕವಾಗಿಯೂ ಅವನ್ನು ತನ್ನ ಕಾವ್ಯದೊಳಗೇ ಉಲ್ಲೇಖಿಸಿ–ಬರಲಿದ್ದ

ಶೂನ್ಯಸಂಪಾದನೆಯ ಮಾದರಿಗೆ ಮತ್ತಷ್ಟು, ಪುಟ ಕೊಟ್ಟನು.

ಪ್ರೌಢದೇವರಾಯನ ಕಾಲದ ಮಹಲಿಂಗನು ಸಂಕಲನ ಮಾಡಿದ ಪ್ರಭುದೇವರ ಷಟ್ಸ್ಥಲದ ವಚನಗಳನ್ನು ತನ್ನ ಶೂನ್ಯಸಂಪಾದನೆಗೆ ಯಥೇಚ್ಛವಾಗಿ ಬಳಸಿಕೊಂಡ ಮತ್ತು ಕ್ರಿ.ಶ. 1513ರಲ್ಲಿ ಭಾವಚಿಂತಾರತ್ನವನ್ನು ಬರೆದ ಗುಬ್ಬಿಯ ಮಲ್ಲಣಾರ್ಯ II ನಿಂದ ತನ್ನ ಗದ್ಯಗ್ರಂಥವಾದ "ವೀರಶೈವಾಮೃತ"ವನ್ನು (ವೀರಶೈವಾಮೃತಮಹಾ ಪುರಾಣವಾಗಿ) ಪದ್ಯಾನುವಾದವಾಗಲೆಂದು ಇಚ್ಛಿಸಿದ ಹಲಗೆಯಾರ್ಯನೂ, ಒಂದು ರೀತಿಯಲ್ಲಿ ಅಲ್ಪಸ್ವಲ್ಪ ವ್ಯತ್ಯಾಸಗಳೊಡನೆ ಶಿವಗಣಪ್ರಸಾದಿಯ ಪ್ರಭುದೇವರ ಶೂನ್ಯಸಂಪಾದನೆಯನ್ನು ಪದ್ಯರೂಪದ ಪ್ರಭುಲಿಂಗಲೀಲೆಗೆ ತಿರುಗಿಸಿದ ಚಾಮರಸನೂ[3] ಇದ್ದ ಹದಿನೈದನೇ ಶತಮಾನವು ಮೂರನೆಯ ಘಟ್ಟ. ಈ ಅವಧಿಯಲ್ಲಿ ಮೂಲ ಶೂನ್ಯಸಂಪಾದನೆ ಮೊದಲ ಪರಿಷ್ಕರಣಕ್ಕೆ ಒಳಗಾಯಿತು; ಮೇಲಾಗಿ ಅದು ಷಟ್ಪದಿ (ಪ್ರಭುಲಿಂಗಲೀಲೆಯ) ರೂಪವನ್ನು ತಳೆದು ಪಾಡುಗಬ್ಬವಾಗಿ ಭಿನ್ನ ಭಿನ್ನ ರುಚಿಯವರಿಗೆ ಒಗ್ಗಿ ಬಂದಿತು.

ಕೊನೆಯ ಘಟ್ಟವಾದ ಹದಿನಾರನೆಯ ಶತಮಾನಕ್ಕೆ ಸೇರಿದವರೇ ತೋಂಟದ ಸಿದ್ಧಲಿಂಗನ ಶಿಷ್ಯರಾದ ಗುಮ್ಮಳಾಪುರದ ಸಿದ್ಧಲಿಂಗ ಮತ್ತು ಗೂಳೂರು ಸಿದ್ಧವೀರ. ಈ ಅವಧಿಯಲ್ಲಿ ಇವರಿಬ್ಬರೂ ಸಿದ್ಧರಾಮನ ದೀಕ್ಷೆಯ ಅಂಶವನ್ನು ಮಾತ್ರ ಹಲಗೆಯಾರ್ಯನಲ್ಲಿ ಒಪ್ಪಿಕೊಂಡು ಮಿಕ್ಕಂತೆ ಹಲವಾರು ಅಂಶಗಳಲ್ಲಿ ಭಿನ್ನಾಭಿಪ್ರಾಯವನ್ನು ಹೊಂದಿದ್ದು ಶಿವಗಣಪ್ರಸಾದಿಯ ಮೂಲ ಶೂನ್ಯಸಂಪಾದನೆಯನ್ನು ವ್ಯಗ್ರತೆಯಿಂದ ತಿದ್ದಿದರು.

ಕಡೆಯ ಎರಡು ಘಟ್ಟಗಳಲ್ಲಿ ಮೂಲ ಶೂನ್ಯಸಂಪಾದನೆಯೊಳಕ್ಕೆ ಅಧಿಕ ಸಂಖ್ಯೆಯಲ್ಲಿ ಸೇರ್ಪಡೆಯಾದ ಶಿವಶರಣರ ವಚನಗಳ ಮೂಲಕ ವೀರಶೈವಧರ್ಮದ ಪ್ರಕ್ರಿಯೆಗಳು ವಿಶದಗೊಂಡವು. ಜೊತೆಗೆ ವೀರಶೈವದ ಜೀವರತ್ನವಾದ ಕಾಯಕ ತತ್ವವನ್ನು ಪ್ರತಿಪಾದಿಸುವ ಹೊಸ ಹೊಸ ಸಂಪಾದನೆಗಳು ರಚಿತವಾಗಿ ಸೇರ್ಪಡೆಯಾದವು.

ಈ ದೃಷ್ಟಿಯಿಂದ ಮೇಲೆ ಪ್ರಸ್ತಾಪಿಸಿರುವ ಗ್ರಂಥಕರ್ತೃಗಳನ್ನು ಕಾಲಕ್ರಮದಲ್ಲಿ ಈ ಕೆಳಗಿನಂತೆ ನಿಲ್ಲಿಸಬಹುದು:

1. ಸಿಂಗಿರಾಜ (ಬಸವ ಚಾರಿತ್ರ್ಯ)
2. ಶಿವಗಣಪ್ರಸಾದಿ ಮಹಾದೇವಯ್ಯ (ಪ್ರಥಮ ಶೂನ್ಯಸಂಪಾದನೆ)
3. (ಅ) ಲಕ್ಕಣ್ಣದಂಡೇಶ (ಶಿವತತ್ವ ಚಿಂತಾಮಣಿ)

(ಆ) ಮಹಾಲಿಂಗ (ವಚನ ಸಂಕಲನ)

(ಇ) ಹಲಗೆಯಾರ್ಯ (ಎರಡನೆಯ ಶೂನ್ಯಸಂಪಾದನೆ)

4. ಚಾಮರಸ (ಪ್ರಭುಲಿಂಗಲೀಲೆ)

5. ಗುಮ್ಮಳಾಪುರದ ಸಿದ್ದಲಿಂಗ (ಮೂರನೇ ಶೂನ್ಯಸಂಪಾದನೆ)

6. ಗೂಳೂರು ಸಿದ್ಧವೀರ (ನಾಲ್ಕನೇ ಶೂನ್ಯಸಂಪಾದನೆ)

**ಕೃತಿ–ಕೃತಿಪತಿ–ಕೃತಿಕರ್ತ**

ಹನ್ನೆರಡನೇ ಶತಮಾನದ ಪ್ರಾಚೀನ ಕರ್ನಾಟಕದ ಜನತೆಯ ಬಹುಪಾಲು ಆಳರಸರ ಜಗ್ಗುಲಗ್ಗೆಯಿಂದಾಗಿ ಪರಿಣಮಿಸಿದ ಬಡತನಕ್ಕೆ ಅಂಟಿ ಬಂದ ಮಿತಿಮೀ–ರಿದ ದುಡಿಮೆಯಿಂದಾಗಿ, ಆ ದುಡಿಮೆಗೇ ಅಂಟಿ ಬಂದ ಜಾತಿಸೂತಕದಿಂದಾಗಿ–ವಿಶ್ರಾಂತಿಯಿಲ್ಲದೆ, ಮಾನಮರ್ಯಾದೆ ಇಲ್ಲದೆ, ಕಡೆಗೆ ಗೇಣುಹೊಟ್ಟೆಗೆ ಹಿಡಿ ಅನ್ನವೂ ಇಲ್ಲದೆ ಭೂಮಿಯ ಮೇಲೆ ಮನುಷ್ಯನಾಗಿ ಹುಟ್ಟುವುದೊಂದು ಶಾಪವೆಂದು ತವಕತಲ್ಲಣಕ್ಕೆ ಒಳಗಾಗಿದ್ದರು.

ಆಗ ಕಲ್ಯಾಣದಲ್ಲಿ ಮೂಲಮೂರ್ತಿಯಾಗಿ ಬಸವಣ್ಣನೂ, ಇಡೀ ಕರ್ನಾಟಕದಲ್ಲಿ ಜಂಗಮಮೂರ್ತಿಯಾಗಿ ಪ್ರಭುದೇವನೂ ನಡೆಸಿದೊಂದು ದೊಡ್ಡ ಚಳುವಳಿಯಿಂದ ಜನದಲ್ಲಿ ಜಾಗೃತಿ, ಭರವಸೆ, ಎದೆಗಾರಿಕೆ, ಕರ್ಮಕೌಶಲ, ತ್ಯಾಗಶೀಲ–ಮುಖ್ಯವಾಗಿ ಧಾರ್ಮಿಕ ಮತ್ತು ಸಾಮಾಜಿಕ ಕ್ಷೇತ್ರದಲ್ಲಿ ಪಕ್ಕ ಬಿಚ್ಚುವಂತಾಯಿತು.

ಅವರ ದಿಗ್ದರ್ಶನದಲ್ಲಿ ಸಾಧನೆ ಮಾಡಿದ ಜನ ಕೈತುಂಬ ಕೆಲಸಮಾಡಿ, ಹೊಟ್ಟೆ ತುಂಬ ಊಟಮಾಡಿ, ಕಣ್ತುಂಬ ನಿದ್ದೆ ಮಾಡಿದರು. ಇಂತಹ ಸಮತೋಲನದ ಜೀವನವನ್ನು–ಅದು ಪಾರ್ಥಿವವೇ ಆಗಲೀ–ಅವರ ತಾತ ಮುತ್ತಾತರ ಏಳೇಳು ತಲೆಮಾರಿನಲ್ಲಿ ಯಾರೂ ನಡೆಸಿರಲಿಲ್ಲ.

ಎಂಬುದಿಷ್ಟೇ ಯಾವ ಜನಸಮೂಹಕ್ಕಾದರೂ ಘನತೆಯನ್ನು ಸಂಪಾದಿಸಿಕೊಡುವುದಾದರೂ, ಆ ಜನ ತಮ್ಮೊಂದು ದಿವ್ಯ ಅತೃಪ್ತಿಯಿಂದ ತಮ್ಮ ಜೀವ ವಜ್ರಕ್ಕೆ ಆಧ್ಯಾತ್ಮಿಕ ಸಾಣೆಯಿಟ್ಟು ಹಲವಾರು ಮುಖಕೊಟ್ಟು, ಹೊರಚಿಮ್ಮಿದ ಲೌಕಿಕ ಕಾಂತಿಯೇ ಅಲೌಕಿಕವೆಂಬಂತೆ ಪಜ್ಜಳಿಸುವ ಹಾಗೆ ಮಾಡಿದರು.

ಮೇಲಾಗಿ ಅಂದಿನ ಸಾಹಿತ್ಯ–ನೃತ್ಯ–ಸಂಗೀತ ಮುಂತಾದ ಲಲಿತಕಲೆಯ ಒಳ ಪ್ರಕಾರಗಳಲ್ಲಿ ಜನಸಾಮಾನ್ಯದ ರುಚಿ ಅಭಿರುಚಿಗಳೂ, ಅವರ ಜೀವನದ

ಶಯ್ಯೆ ವಿನ್ಯಾಸಗಳೂ, ಅವರ ಅನುಭಾವದ ಧ್ವನಿಧೋರಣೆಗಳೂ ಹಾಳತವಾಗಿ ಮೇಳೈಸಿ ಬಂದವು.

ಈ ಎಲ್ಲ ಪರಿಪಾಕದಲ್ಲಿ ಪಕ್ವವಾಗಿ ಬಂದ ಶರಣಸಾಹಿತ್ಯವು ಶಿಷ್ಟ ಸಾಹಿತ್ಯದಂತೆ ಕಡುಪೆಡಸೂ ಆಗದೆ, ಜನಪದ ಸಾಹಿತ್ಯದಂತೆ ಅತಿ ನೀರು ಜೋರೂ ಆಗದೆ ತನ್ನದೇ ಆದ ಒಂದು ಸಮರಸವನ್ನು ಮೈಗೂಡಿಸಿಕೊಂಡಿತು.

ಅದು ಸರಳತೆಯಿಂದ ಮುಗ್ಧರನ್ನೂ ಸೂಕ್ಷ್ಮತೆಯಿಂದ ವಿದಗ್ಧರನ್ನೂ ತನ್ನತ್ತ ಆಕರ್ಷಿಸಿತು. ಅದರಲ್ಲಿ ಅಡಗಿದ್ದ ಸಂದೇಶ ಮಾಧುರ್ಯವಂತೂ ಇಬ್ಬರಿಗೂ ಅನ್ವಯವಾಗುವುದಿತ್ತು, ಹಾಗೂ ಗಮ್ಯವಾಗಿತ್ತು.

ಈ ಪರಿಣಾಮಕ್ಕಾಗಿ ಕಲ್ಯಾಣವನ್ನು ಕೇಂದ್ರಮಾಡಿಕೊಂಡು ಮನಸ್ಸು ಮೈಯಿ ಮಾತಿಂದ ದುಡಿದ ಬಸವಣ್ಣ–ಚೆನ್ನಬಸವಣ್ಣ–ನಾಗಾಯಕ್ಕ, ಸೊನ್ನಲಿಗೆಯಿಂದ ದುಡಿದ ಸಿದ್ಧರಾಮ, ಉಡುತಡಿಯಿಂದ ದುಡಿದ ಅಕ್ಕಮಹಾದೇವಿ, ಎಲ್ಲೆಡೆಯಿಂದ ದುಡಿದ ಪ್ರಭುದೇವ ಇವರೆಲ್ಲರಿಗೆ ಬೆಂಬಲವಾಗಿದ್ದ ಹಡಪದಪ್ಪಣ್ಣ, ಮುಕ್ತಾಯಕ್ಕ, ಸೊಡ್ಡಳ ಚಾಚರಸ, ಕಿನ್ನರ ಬೊಮ್ಮಣ್ಣ, ಮಡಿವಾಳ ಮಾಚಯ್ಯ, ಮೋಳಿಗೆ ಮಾರಯ್ಯ, ಮೇದರ ಕೇತಯ್ಯ, ಏಕಾಂತದ ರಾಮಯ್ಯ, ಘಟ್ಟಿವಾಳ ಮುದ್ದಣ್ಣ, (ಕಡೆಗೆ ಆ ಕಾಲದವರಲ್ಲದ ಪೂರ್ವಾಚಾರ್ಯರಾದ ಕಕ್ಕಯ್ಯ, ಶಂಕರದಾಸಿಮಯ್ಯ), ಇವರೆಲ್ಲರ ಜೀವನ ಸೂತ್ರಗಳನ್ನು ಹಾಸುಹೊಕ್ಕಾಗಿ ಬೀಸಿ, ಅವರ ವಚನ ವಾಕ್ಯಗಳನ್ನು ಬಣ್ಣ ಬಣ್ಣವಾಗಿ ಪೂಸಿ, ಶೂನ್ಯಸಂಪಾದನೆಯೆಂಬ ಅದ್ಭುತ ದಿವ್ಯಾಂಬರವನ್ನು ನೇದಿರುವನು ಶಿವಗಣಪ್ರಸಾದಿ ಮಹಾದೇವಯ್ಯ.

ಅವನ ಈ ಶೂನ್ಯಸಂಪಾದನೆ ವೀರಶೈವಧರ್ಮದ ಮಹಾಪ್ರಸ್ಥಾನ. ಅದೇ ನಮ್ಮ ಪರಿಷ್ಕೃತ ಬೈಬಲ್ಲು ಮತ್ತು ಖುರಾನು.

ಇಲ್ಲಿ ವೀರಶೈವದ ಎರಡು ಶ್ವಾಸಕೋಶಗಳಂತಿರುವ ಪ್ರಭುದೇವನ ಮತ್ತು ಬಸವಣ್ಣನ ಹೋರಾಟದ ಬದುಕಿನ ಬಳ್ಳಿಗಳು ಸಮನ್ವಯದ ಹಂದರದ ಮೇಲೆ ಹಬ್ಬಿವೆಯೆನ್ನಬಹುದು.

ಈ ಶೂನ್ಯಸಂಪಾದನೆಯು ಮುಖ್ಯವಾಗಿ ಪ್ರಭುದೇವರ ಶೂನ್ಯಸಂಪಾದನೆಯೇ ಆದರೂ ಬಸವಣ್ಣನ ಧಾರ್ಮಿಕಜೀವನ ಅದರೊಳಗೇ ಓತಪ್ರೋತವಾಗಿದೆ.[4] ಶೂನ್ಯ ಸಂಪಾದನೆಯು ಪ್ರಭುದೇವರ ಜೀವನವೃತ್ತಾಂತದಿಂದ ಆರಂಭವಾದರೂ, ಅದರ ಸಂರಂಭವೆಲ್ಲಾ ಕಲ್ಯಾಣದಲ್ಲಿ, ಆದುದರಿಂದಲೇ ಅದು ಅವನು ಕದಳಿಯಲ್ಲಿ ಕಣ್ಮರೆಯಾದಲ್ಲಿಗೇ ಸಮಾಪ್ತಿಯಾಗದೆ, ಬಸವಾದಿಪ್ರಮಥರ

ಅವತಾರದ ಇತಿಶ್ರೀಯನ್ನು ಹಾಡಿ, ಆ ಅವತಾರದ ಕಾರ್ಯಕ್ಷೇತ್ರವಾದ ಕಲ್ಯಾಣದ ಚರಮಗೀತೆಯಿಂದ ದಿವ್ಯ ದುಃಖದಲ್ಲಿ ತುಂಬಿ ಮುಡಿಯುವುದು.

ಪ್ರಭುದೇವನು ಶೂನ್ಯಸಂಪಾದನೆಯ ಪ್ರಾರಂಭದಲ್ಲಿ ಮುಕ್ತಾಯಕ್ಕ ಸಿದ್ಧರಾಮರನ್ನು ಕಾಣುವನಾದರೂ, ಅದು ಅವನ ಜಂಗಮಜೀವನದಲ್ಲಿ ಮುಂದೆಯೂ ಸಂಭವಿಸುವ ಹಲವಾರು ಪ್ರಸಂಗಗಳಲ್ಲಿ ಕೆಲವಾಗಿದ್ದು–ಅವು ಅವನು ಕಲ್ಯಾಣದತ್ತ ಖಚಿತವಾಗಿ ಹಿಡಿದ ಹಾದಿಯಲ್ಲಿ ಸಂಭವಿಸುವಂಥವು. ಆಮೇಲೆ ಪ್ರಭುದೇವನು ಕಲ್ಯಾಣವನ್ನೇ ಕುರಿತು ಬಿಲ್ಲಿನಿಂದ ಜಿಗಿದ ಬಾಣದಂತೆ ಹೋಗುವನು. ಆಗ ಅವನು ಬಸವಾದಿಪ್ರಮಥರಿಂದ ಸತ್ಕೃತನಾದುದು ಶೂನ್ಯಸಂಪಾದನೆಯ ಪ್ರಥಮಘಟ್ಟದ ಘಟನಾವಳಿಯಲ್ಲಿ ಸಾರರೂಪವಾದುದು.

ಸತ್ಕೃತನಾದ ಮೇಲೆ ಪ್ರಭುದೇವನು ದೇಶಸಂಚಾರಕ್ಕೆ ಹೊರಟನಾದರೂ ಆ ವೃತ್ತಾಂತವು ಶೂನ್ಯಸಂಪಾದನೆಯಲ್ಲಿ ಕೇವಲ ವಾರ್ತಾರೂಪದಲ್ಲಿ ಸಂಗ್ರಹವಾಗಿ, ಮತ್ತೆ ಅವನು ಕಲ್ಯಾಣಕ್ಕೆ ಬಂದು ಅಲ್ಲಿನ ಶರಣರೊಡನೆ ನಡೆಸಿದ ಅವನ ಅನುಭಾವ ಕಾರ್ಯಕ್ರಮವೇ ಶೂನ್ಯಸಂಪಾದನೆಯ ಎರಡನೇ (ಅಥವಾ ಕೊನೇ) ಘಟ್ಟದ ಘಟನಾವಳಿಯಲ್ಲಿ ಸಾರರೂಪವಾದುದು.

ಈ ವಿನ್ಯಾಸದಿಂದ–ಸುತ್ತುಮುತ್ತಿಗೆಲ್ಲ ಬೆಳಕು ಚೆಲ್ಲಿ ಉರಿದ ಬಸವಕಕ್ಕಡಕ್ಕೆ ಪ್ರಭುದೇವನೇ ಸುರಿದ ತುಪ್ಪವೆಂಬುದೂ ಸ್ಪಷ್ಟ.

ಪ್ರಭುದೇವನು ತನ್ನ ದಿವ್ಯ ಸಂದೇಶದಿಂದ ಬಸವಣ್ಣ ಮುಂತಾದವರನ್ನು ಕೃತಾರ್ಥರನ್ನಾಗಿ ಮಾಡಿದನೆಂದಿರುವುದಾದರೂ, ಆ ಅಲ್ಲಮಪ್ರಭುವಿಗೇ ಗುರುಸ್ಥಾನದಲ್ಲಿ ನಿಲ್ಲುವನು ಬಸವಣ್ಣನೆಂಬ–ಒಂದು ಇತಿವೃತ್ತದ ಸೂತ್ರದಿಂದ ಭಕ್ತ ಮತ್ತು ಜಂಗಮದ ಸಮಾನತೆ ಮತ್ತು ಸಮರಸವನ್ನು ಸ್ಥಾಪಿಸಿರುವನು. ಶಿವಗಣಪ್ರಸಾದಿ ಮಹಾದೇವಯ್ಯ ತನ್ನ ಶೂನ್ಯಸಂಪಾದನೆಯಲ್ಲಿ:

ಬಸವನೇ ವೃಷಭನೆಂದೂ, ಆ ವೃಷಭನು ಅನಿಮಿಷನಿಗೆ ಶಿವಲಿಂಗವನ್ನು ಕೊಟ್ಟಿದ್ದನೆಂದೂ, ಆ ಅನಿಮಿಷನಿಂದಲೇ ಅಲ್ಲಮನು ಆ ಪ್ರಾಣಲಿಂಗವನ್ನು ಪಡೆದನೆಂದೂ, ಆ ಘನಲಿಂಗವನ್ನೇ ತತ್ವರೂಪದಲ್ಲಿ ಅಲ್ಲಮನಿಂದ ಬಸವಣ್ಣನು ಮತ್ತೆ ಪಡೆದನೆಂದೂ ಬಳಕೆಯಲ್ಲಿರುವ ಕಥೆ ಹೇಳುವುದು.

ಈ ಪವಣಿಗೆಯಿಂದ ಗುರು–ಶಿಷ್ಯ ಸಂಬಂಧವು ಪರಸ್ಪರ ಗೌರವಾಸ್ಪದವಾಗಿ ಈ ಶೂನ್ಯಸಂಪಾದನೆಯ ಶಯ್ಯೆಯಲ್ಲಿ ಪ್ರಕಟಗೊಂಡಿದೆ. ಇಲ್ಲಿನ ಇಂಥದೇ ಇನ್ನೊಂದು ಪ್ರಸಂಗವನ್ನು ಪ್ರಸ್ತಾಪಿಸಬಹುದು: ಬಸವಣ್ಣನು ಚೆನ್ನಬಸವಣ್ಣನ ಗುರು–

ಹಿರಿಯನೆಂಬುದು ವಾಸ್ತವಿಕವಾದರೂ ಆ ಚೆನ್ನಬಸವಣ್ಣನಿಂದಲೇ ಪ್ರಾಣಲಿಂಗದ ರಹಸ್ಯವನ್ನು ತಿಳಿದುಕೊಳ್ಳುವನು ಬಸವಣ್ಣ.[5]

ಸತ್ಯಾನ್ವೇಷಣೆಯ ಪಥದಲ್ಲಿ ಆಗುತ್ತ ಹೋಗುವ ನಿರಂತರ ಪ್ರಗತಿಗೆ ಇದು ಮಾದರಿ. ಆದುದರಿಂದಲೇ ಲೌಕಿಕದಲ್ಲೇ ಅಲ್ಲ, ಅಲೌಕಿಕದಲ್ಲೇ ಆಗಲಿ; ಚಿಕ್ಕದು ದೊಡ್ಡದು ಎಂಬುದು ಕೇವಲ ತಾತ್ಕಾಲಿಕ; ಪ್ರಗತಿಯ ಪಥದಲ್ಲಿ ಅವು ಪರಸ್ಪರ ಪೂರಕ ಮತ್ತು ತಾರಕ.

ಉಪಸಂಹರಿಸಿ ಹೇಳುವುದಾದರೆ–ಶೂನ್ಯಸಂಪಾದನೆಯಲ್ಲಿ ಪ್ರಭುದೇವನೇ ನಾಯಕನಾದರೂ ಅವನಿಗೆ ಹೊಯ್‌ಕಯ್ಯಾಗಿ ಬಸವಣ್ಣನ ಪಾತ್ರವನ್ನು ದಳದಳವಾಗಿ ಅರಳಿಸಿರುವನು ಶಿವಗಣಪ್ರಸಾದಿ. ಇವನು ಹೀಗೆ ಮಾಡುವಲ್ಲಿ ತನಗಿಂತ ಹಿಂದಿನ ಯಾವ "ಪುರಾಣ"ದಲ್ಲೂ ನಾಯಕಪಾತ್ರವಾಗಿ ಚಿತ್ರಣಗೊಳ್ಳದ ಪ್ರಭುದೇವನ ದಿವ್ಯ ಜೀವನವನ್ನು ಕಂಡರಿಸುವುದರ ಜೊತೆಗೆ, ಮಹಾಮಹಿಮಾನ್ವಿತನಾದ ಆ ಪ್ರಭುದೇವನ ವ್ಯಕ್ತಿತ್ವದ ವಿಶೇಷ ಕಾಂತಿಯನ್ನು ಬಣ್ಣ ಬಣ್ಣವಾಗಿ ಕ್ರೋಢೀಕರಿಸಿ, ಕಲ್ಯಾಣದ ಕ್ರಾಂತಿ ಪುರುಷನಾದ ಬಸವಣ್ಣನ ಮೇಲೆ ಹೊರಚೆಲ್ಲಿ, ಅವನ ಅಂ–ದಚಂದವನ್ನು ನಾನಾ ಕೋನಗಳಿಂದ ಪ್ರದರ್ಶಿಸುವುದನ್ನು ಮುಖ್ಯ ಗು–ರಿಯಾಗಿಟ್ಟುಕೊಂಡಿದ್ದನು. ಜೊತೆಗೆ ಚೆನ್ನಬಸವಣ್ಣನ ಜ್ಞಾನ, ಮಡಿವಾಳ ಮಾಚಯ್ಯನ ಗಂಡುನಿಷ್ಠೆ ಮಿಳಿತವಾಗಿ ಕಂಗೊಳಿಸುವಂತೆ ಸಜ್ಜುಗೊಳಿಸಿದನು. ಈ ಹಿನ್ನೆಲೆಯಲ್ಲಿ ಅಕ್ಕಮಹಾದೇವಿ ಮುಂತಾದವರ ವಿಭೂತಿ ಸಂಭವಿಸುವುದು.

ಕೊನೆಯದಾಗಿ, ಈ ಶೂನ್ಯಸಂಪಾದನೆಯಲ್ಲಿ (ಮೊದಲಿಗೆ) ಶೈವನಾಗಿದ್ದನೆನಿಸಿ ಕೊಂಡಿರುವ ಸಿದ್ಧರಾಮನು ಕೊನೆಯವರೆಗೂ ಶೈವನಾಗಿಯೇ ಉಳಿದು–ಅಂ–ದರೆ ಲಿಂಗಧಾರಿಯಾಗಿ ಮತಾಂತರ ಹೊಂದದಿದ್ದರೂ–ವೀರಶೈವಧುರೀಣ–ರ ಸಮೇಳದಲ್ಲಿ ಸಮಸಮಪುರಸ್ಕೃತನೂ, ಸಮಾನಪೂಜ್ಯನೂ ಆದನೆಂಬಂತೆ ಚಿತ್ರಣಗೊಂಡಿರುವುದಂತೂ ಶಿವಗಣಪ್ರಸಾದಿಗೆ ವಿಶ್ವಧರ್ಮದಲ್ಲಿದ್ದ ಶ್ರದ್ಧೆಯನ್ನು ಸಾರಿ ಹೇಳುವುದು. ಮುಖ್ಯವಾಗಿ ಪರಧರ್ಮೀಯರ ಬಗ್ಗೆ ಪ್ರಭುದೇವನಿಗೆ ಎಷ್ಟು ಗೌರವಭಾವವಿತ್ತು ಎಂಬುದು ಗಮ್ಯವಾಗುವುದು. ಸಿದ್ಧರಾಮನಂತಹ ಮಹನೀಯನಿಗೆ ಲಿಂಗಧಾರಣೆಯ ಅವಶ್ಯಕತೆ ಇಲ್ಲವೆಂದು ಪ್ರಭುದೇವನು ಹೇಳಿದಾಗ, ಆ ನಿಲವನ್ನು ಒಪ್ಪಿ (ಅನ್ಯಮತಗಳನ್ನು ಖಂಡಿಸಿ ಸ್ವಮತವನ್ನು ಸ್ಥಾಪಿಸುವ ಕುರುಕ್ಷೇತ್ರದಲ್ಲಿ–ವಿಷಾದಯೋಗವನ್ನು ದೂರಮಾಡಿ ಕೈಗೆ ಬಿಲ್ಲು ಬಾಣವೆತ್ತಿಕೊಂಡು ಕಣಕ್ಕಿಳಿದಿದ್ದ) ಬಸವಣ್ಣ–ಚೆನ್ನಬಸವಣ್ಣ ಮಡಿವಾಳ ಮುಂತಾದವರು ಪರಧರ್ಮದ ಬಗ್ಗೆ ಮತ್ತು ಪರಧರ್ಮೀಯರ ಬಗ್ಗೆ ಗೌರವಾನ್ವಿತ ಪರಿವರ್ತನೆಯನ್ನು ಹೊಂದಿ–

ಅಲ್ಲಮನನ್ನು ಪೂಜಿಸಿ ತಾವೂ ಪೂಜ್ಯರಾದರೆಂಬುದನ್ನು ಬಿಡಿಸಿ ತೋ–ರಿಸಿರುವನು ಶಿವಗಣಪ್ರಸಾದಿ ಮಹಾದೇವಯ್ಯ. ಇದೆಲ್ಲ ಕರ್ಣಾಟಕದ ಧರ್ಮಕ್ಕೆ ಸಾಹಿತ್ಯಕ್ಕೆ ಮಹಾದೇವಯ್ಯ ಕೊಟ್ಟಂಥ ಬಲು ದೊಡ್ಡ ಕೊಡುಗೆ. ಅದು ಅವನ ದೊಡ್ಡತನಕ್ಕೂ ತಗುವಂತಹ ತೂಕವಾದ ಕಾಣಿಕೆ. ಮತ್ತು ಅದು ಮಹಾದೇವಯ್ಯನ ವ್ಯಕ್ತಿತ್ವಕ್ಕೆ ಹಿಡಿದ ಹತ್ತಾರು ಕನ್ನಡಿಯಂತಿದೆ. ಇಂತಹ ಮಹನೀಯನ ಘಟನಾತ್ಮಕವಾದ ಜೀವನಚರಿತ್ರೆ ನಮಗೆ ತಿಳಿಯದು. ಅವನ ಸಂಬಂಧವಾಗಿ ಆಮೇಲೆ ಬಂದ ಶೂನ್ಯಸಂಪಾದನಕಾರರು ಕೃತಜ್ಞತೆಯಿಂದ ಆಡುವ ಒಂದೆರಡು ಮಾತುಗಳಿಂದಲಾಗಲಿ, ಪೂರ್ವಕವಿಗಳನ್ನು ಸ್ಮರಿಸುವ ಅವಸರದಲ್ಲಿ ಸಿದ್ಧ ನಂಜೇಶನು ಮಾಡಿರುವ ಅವನ ನಾಮಸ್ಮರಣೆಯಿಂದಲಾಗಲಿ ಅವನ ಜೀವನ ವೃತ್ತಾಂತದ ಮೇಲೆ ಬೆಳಕೂ ಬೀಳುವುದಿಲ್ಲ, ಬಿದ್ದರೂ ಹೊಸದೇನೂ ಕಾಣುವುದಿಲ್ಲ. ಆದುದ–ರಿಂದ ಈ ಸಂಬಂಧವಾಗಿ ಬಾಹ್ಯಾಧಾರಗಳಿಲ್ಲವೆನ್ನಬಹುದು. ಇಲ್ಲಿ ಆಡಬೇಕಾದ ಒಂದು ಮಾತೆಂದರೆ–ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಇಷ್ಟು ದೊಡ್ಡ ಕೆಲಸಮಾಡಿ ಇಷ್ಟು ಕಡಿಮೆ ಪ್ರಶಂಸೆ ಪಡೆದವನೆಂದರೆ ಮಹಾದೇವನಂತಹವನು ಇನ್ನೊಬ್ಬನಿಲ್ಲ.

ಮಹಾದೇವಯ್ಯನ ಹೆಸರಿಗೆ ಅಂಟಿ ಬಂದಿರುವ "ಶಿವಗಣಪ್ರಸಾದಿ" ಎಂಬುದು ಅವನ ನಿತ್ಯಕಾಯಕದ ಹೆಸರು–ಹಾಗೆಂದೇ ಅವನು ಹೆಸರುವಾಸಿಯಾಗಿದ್ದಾನೆ:

"ಶಿವಗಣಂಗಳು ಆರೋಗಿಸಿ ಮಿಕ್ಕ ಶಿವಪ್ರಸಾದಮಂ ಕಂಡು, ಉಬ್ಬಿಕೊಬ್ಬಿ ನಲಿನಲಿದಾಡುತ್ತ ಆ ಪ್ರಸಾದದೊಳು ಅಣುಮಾತ್ರಮಂ ನೆಲಕ್ಕೆ ತಪ್ಪಲೀಯದೆ ಎತ್ತಿ ತಂದು, ಮಹಾಪ್ರಸಾದರಾಶಿಯಂ ಮಾಡಿ, ಆ ಪ್ರಸಾದಮಂ ಅಷ್ಟವಿಧಾರ್ಚನೆಯಿಂದರ್ಚಿಸಿ, ಪರಮಾನಂದದಿಂ ಪ್ರಸಾದಮಂ ಸ್ವೀಕಾರಂ ಮಾಡಿ ಪರಮ ಪರಿಣಾಮದೊಳಿಪ್ಪ ಶಿವಗಣಪ್ರಸಾದಿ"ಗಳು ಬಸವಣ್ಣನ ಮನೆಯಲ್ಲಿದ್ದರೆಂದು ತನ್ನ ಶೂನ್ಯಸಂಪಾದನೆಯಲ್ಲಿ (279 ಗ) ವರ್ಣನೆ ಮಾಡುವಾಗ ಮಹಾದೇವಯ್ಯನು ತನ್ನ ವೃತ್ತಿಯನ್ನೂ ಚಿತ್ತವೃತ್ತಿಯನ್ನೂ ಕು–ರಿತಂತೆ ಕಾಣುವುದು. ಅವನ ಶೂನ್ಯಸಂಪಾದನೆಯಲ್ಲಿ ಬರುವ ಮರುಳು ಶಂಕರದೇವರ ಪಾತ್ರದ ಎಲ್ಲ ಘನತೆ ಗಾಂಭೀರ್ಯ ಪ್ರಸನ್ನತೆ ಮತ್ತು ನಿರಾಡಂಬರ ಗುಪ್ತಭಕ್ತಿಯ ಚಿತ್ರಣಕ್ಕೆ ಮಹಾದೇವಯ್ಯನು ತನ್ನ ಹೃನ್ನಾಳದ ಬಿಸಿರಕ್ತವನ್ನು ಬಳಸಿದ್ದಾನೆ. ಮಹಾದೇವಯ್ಯನು ತನ್ನ ಕೃತಿಯಲ್ಲಿ ಕಲ್ಯಾಣದ ಬಗ್ಗೆ ಹರಿಸಿರುವ ಮಮತೆಯ ಭಾವದ ಬೆಂಬಲದಿಂದ–ಕಲ್ಯಾಣವೇ ಅವನ ನೆಲೆವೀಡಾಗಿತ್ತೆಂದೂ ಊಹಿಸಬಹುದು. ಹೀಗೆ ಕಲ್ಯಾಣದವನೇ (?) ಆದ ಮಹಾದೇವಯ್ಯನು ಕಲ್ಯಾಣದ ಕ್ರಾಂತಿಜ್ಯೋತಿಗೆ ಪುಟವಿಡುವ ಸ್ಫಟಿಕ ಘಟವಾಗಿ ಏರ್ಪಟ್ಟುದು ಚರಿತ್ರೆಯ ಒಂದು ಅಪೂರ್ವಯೋಗ.

**ಆಮೇಲೆ ಬಂದ ಶೂನ್ಯ ಸಂಪಾದನೆಗಳು:**

ಇದುವರೆಗೆ ಅಚ್ಚಿನಲ್ಲಿ ಕಂಡಿರುವುದು ಮತ್ತು ಪ್ರಚಾರದಲ್ಲಿರುವುದು ನಾಲ್ಕರಲ್ಲಿ ಒಂದೇ ಶೂನ್ಯಸಂಪಾದನೆ. ಅದು ಗೂಳೂರು ಸಿದ್ಧವೀರನದು (ಇತ್ತೀಚಿನದು ಮತ್ತು ಕೊನೆಯದು). ಇವನ ಹಿಂದಿನವನು ಗುಮ್ಮಳಾಪುರದ ಸಿದ್ದಲಿಂಗ. ಅವರಿಗೆ ಹಿಂದಿನವನು ಹಲಗೆಯಾರ್ಯ, ಅವನಿಗೂ ಹಿಂದಿನವನು ನಮ್ಮ ಶಿವಗಣಪ್ರಸಾದಿ ಮಹಾದೇವಯ್ಯ. ಇವನದೇ ಪ್ರಪ್ರಥಮ ಶೂನ್ಯಸಂಪಾದನೆ. ಇದನ್ನು ಮೂಲವಾಗಿ ಇಟ್ಟುಕೊಂಡೇ ಮುಂದೆ ಬಂದ ಹಲಗೆಯಾರ್ಯ ಮುಂತಾದವರು ಪರಿಷ್ಕರಣವನ್ನು ಕೈಗೊಂಡರು. ಹೀಗೆ ಪರಿಷ್ಕರಿಸುವಲ್ಲಿ ಮೂಲ ಶೂನ್ಯಸಂಪಾದನೆಯಲ್ಲಿ ಇದ್ದುದನ್ನು ಬಿಟ್ಟಿರುವುದು ಒಂದಂಶವಾದರೆ ಸೇರಿಸಿರುವುದು ನೂರಂಶ–ಅದೂ ಮುಖ್ಯವಾಗಿ ಸಿದ್ಧರಾಮನ ದೀಕ್ಷಾಪ್ರಸಂಗವನ್ನು ಪ್ರತಿಷ್ಠಾಪಿಸುವುದಕ್ಕಾಗಿ, ಮತ್ತು ನುಲಿಯ ಚಂದಯ್ಯ ಮುಂತಾದವರನ್ನು ಕುರಿತ ಹೊಸ ಹೊಸ ಉಪಸಂಪಾದನೆಗಳ ಸೇರ್ಪಡೆಗಾಗಿ. ಜೊತೆಗೆ ಬಸವಣ್ಣ ಮುಂತಾದವರ ದೀರ್ಘವಾದ ಕಥೆಗಳೂ, ವೀರಶೈವದ ಮತೀಯ ಪರಿಭಾಷೆಯ ವಿವರಗಳೂ ಹಲಗೆಯಾರ್ಯನ ಪರಿಷ್ಕರಣದ ವೈಶಿಷ್ಟ್ಯವಾದರೆ ಶಿವಶರಣರ ಅವತಾರ ಹುಟ್ಟು, ಬೆಳವಣಿಗೆಗೆ ಸಂಬಂಧಿಸಿದ ಕಲ್ಪನೆ–ವಿಚಾರಗಳು ಪಲ್ಲಟಗೊಂಡವು ಕೊನೆಯ ಎರಡು ಪರಿಷ್ಕರಣಗಳಲ್ಲಿ.[6]

ಈ ಕಾರಣಗಳಿಂದಲೋ ಅಥವಾ ಯಾವುದೋ ಮಾಯೆಯಿಂದಲೋ ಪರಿಷ್ಕರಣಗಳೆಲ್ಲ ಸ್ವತಂತ್ರ ಶೂನ್ಯಸಂಪಾದನೆಗಳೆಂಬಂತೆ ಅರಿಯದವ–ರಿಗೆ ಅದ್ಭುತವಾಗಿ ಕಂಡವು. ಆದರೆ ಅವೆಲ್ಲದರ ನಿಲುವಿಗೆ ಮತ್ತು ಚೆಲುವಿಗೆ ಶಿವಗಣಪ್ರಸಾದಿಯ ಶೂನ್ಯಸಂಪಾದನೆಯೇ ಬೆನ್ನೆಲುಬು ಮತ್ತು ಮೈಕಟ್ಟು.

ಪ್ರಥಮ ಶೂನ್ಯಸಂಪಾದನೆಯಲ್ಲಿ ಯಾವುದಿದ್ದಿದ್ದರೆ ಮುಂದಿನ ಮೂರು ಪರಿಷ್ಕರಣಗಳು ರೂಪುಗೊಳ್ಳುತ್ತಲೇ ಇರಲಿಲ್ಲವೋ–ಅದೇ, ಕಲ್ಯಾಣದಲ್ಲಿ ಸಿದ್ಧರಾಮನಿಗಾಯಿತೆಂಬ ವೀರಶೈವ ದೀಕ್ಷೆಯ ಪ್ರಸಂಗ. ಅದೊಂದು ಹೀನಾಯವಾದ ಕೊರತೆಯಾಗಿ ತೋರಿತು. ಅದನ್ನು ಹಲಗೆಯಾರ್ಯನು ಅತ್ಯದ್ಭುತವಾಗಿ ತುಂಬಿಕೊಟ್ಟನು. ಹೀಗೆ ಮಾಡುವಲ್ಲಿ ಅವನಿಗೆ ತನ್ನ ಶೂನ್ಯಸಂಪಾದನೆಯನ್ನು ವೀರಶೈವಧರ್ಮದ ಕೈಪಿಡಿಯಾಗಿ ಮಾಡುವ ಮಹತ್ವಾಕಾಂಕ್ಷೆಯೂ ಸೇರಿತ್ತು. ಇದೆಲ್ಲದರ ಜೊತೆಗೆ ನುಲಿಯ ಚಂದಯ್ಯನ ಒಂದು ಪ್ರಸಂಗ (ಸಂಪಾದನ) ವನ್ನು ಅಧಿಕವಾಗಿ ರಚಿಸಿ ಸೇರಿಸಿದ ಹಲಗೆಯ ದೇವ. ಇದನ್ನು ಮುಂದೆ ಬಂದ ಶೂನ್ಯಸಂಪಾದನಕಾರರಿಬ್ಬರೂ ತಮ್ಮ ಅನುಕೂಲಕ್ಕೆ ತಕ್ಕಂತೆ ಸಂಗ್ರಹಿಸಿಯೂ, ತಮ್ಮ ಅಭಿರುಚಿಗೆ ಹೊಂದುವಂತೆ ಅಳವಡಿಸಿಯೂ ತಮ್ಮ ತಮ್ಮ ಶೂನ್ಯಸಂಪಾದನೆಗಳೊಳಕ್ಕೆ

ಸೇರ್ಪಡೆ ಮಾಡಿಕೊಂಡರು. ಅಷ್ಟೇ ಅಲ್ಲದೆ ಗುಮ್ಮಳಾಪುರದ ಸಿದ್ದಲಿಂಗನು ಆಯ್ದಕ್ಕಿಮಾರಯ್ಯನ ಸಂಪಾದನೆಯನ್ನು ಹೊಸದಾಗಿ ಕಟ್ಟಿ ಸೇರಿಸಿ, ತನಗಿಂತ ಹಿಂದಿನ ಶೂನ್ಯಸಂಪಾದನೆಗಳಲ್ಲಿ ಸೂಚನೆ ಮಾತ್ರವಾಗಿದ್ದ ಗೋರಕ್ಷ ಪ್ರಸಂಗವನ್ನು ಒಂದು ಸಂಪಾದನೆಯಾಗಿ ವಿಸ್ತರಿಸಿದನು. ಕೊನೆಯವನಾದ ಗೂಳೂರು ಸಿದ್ಧವೀರನು ಇವಷ್ಟನ್ನೂ ಇಟ್ಟುಕೊಂಡು, ಜೊತೆಗೆ, ತನ್ನವೇ ಆದ ಘಟ್ಟಿವಾಳ ಮುದ್ದಣ್ಣ ಮತ್ತು ಮೋಳಿಗೆ ಮಾರಯ್ಯಗಳ ಸಂಪಾದನೆಗಳನ್ನು ಕಟ್ಟಿ ಸೇರಿಸಿದನು.

ಇನ್ನು ಶೂನ್ಯಸಂಪಾದನೆಗಳ ಕಥಾಶರೀರವನ್ನು ಕುರಿತು ಒಂದು ಮಾತು: ಶಿವಗಣಪ್ರಸಾದಿಯು ತನ್ನ ಶೂನ್ಯಸಂಪಾದನೆಯೊಳಕ್ಕೆ ಕಲಾತ್ಮಕ ಅಭಿವ್ಯಕ್ತಿಗೆ ಹಿನ್ನೆಲೆಯಾಗಿ ತೀರ ಅವಶ್ಯವಾದಷ್ಟು ವಿಚಾರಗಳನ್ನು ಮಾತ್ರ ಶಿವಶರಣ–ರ ಸಂಬಂಧವಾಗಿ ಅಲ್ಲಲ್ಲಿ ಸೂಚಿಸಿರುವನು. ಆದರೆ ಹಲಗೆಯಾರ್ಯನು ತನ್ನ ಶೂನ್ಯಸಂಪಾದನೆಯೊಳಕ್ಕೆ ಅಜಗಣ್ಣ, ಸಿದ್ಧರಾಮ, ಬಸವಣ್ಣ, ಚೆನ್ನಬಸವಣ್ಣ ಮುಂತಾದವರ ಜೀವನವನ್ನು ಕುರಿತ ಸುದೀರ್ಘಾಖ್ಯಾನಗಳನ್ನು ತಂದು ತುರುಕಿದನು. ಇದನ್ನೆಲ್ಲ ಮುಂದೆ ಬಂದ ಶೂನ್ಯಸಂಪಾದನಕಾರರು ಅಷ್ಟಾಗಿ ಮಾನ್ಯಮಾಡಲಿಲ್ಲವೆನ್ನಬಹುದು. ಆದರೆ ಗುಮ್ಮಳಾಪುರದ ಸಿದ್ಧಲಿಂಗನು ಬಸವಣ್ಣನ ಕಥೆಯೊಂದಕ್ಕೆ ವಿಶೇಷ ಪಕ್ಷಪಾತವನ್ನು ತೋರಿ ಅದನ್ನು ತನ್ನ ಶೂನ್ಯಸಂಪಾದನೆಯಲ್ಲಿ ಮತ್ತಷ್ಟು ಸುವಿಸ್ತಾರವಾಗಿ ಬೆಳಸಿರುವನು. (ಇದು ಸ್ವರೂಪದಲ್ಲಿ ಹಲಗೆಯಾರ್ಯನು ಹೇಳಿರುವುದಕ್ಕಿಂತ ಬೇರೆಯಾದುದು.) ಸಿದ್ದಲಿಂಗನ ಆ ಕಥೆಯನ್ನೇ ಸಿದ್ಧವೀರನೂ ಸಂಗ್ರಹಿಸಿರುವನು.

ಕೊನೆಯ ಇವರಿಬ್ಬರ ಪ್ರಕಾರ ಬಿಜ್ಜಳನ ಕೊಲೆಯ ಸಂಬಂಧವಾಗಿ ಹರಳಯ್ಯ ಮಧುವಯ್ಯರ ಪಾತ್ರ ಸಮಾವೇಶವಾಗುವುದು. ಇವರಿಗಿಂತ ಹಿಂದೆ ಈ ಅಂಶ ಎಲ್ಲಿಯೂ ಪ್ರಸ್ತಾಪಗೊಂಡಿಲ್ಲ.

ಒಟ್ಟಿನಲ್ಲಿ ಶಿವಗಣಪ್ರಸಾದಿಯ ಶೂನ್ಯಸಂಪಾದನೆಯನ್ನು ಅವನ ಪ್ರಾರ್ಥನೆಯ ಮೇರೆಗೇ ಆದರೂ–ಅವನ ಇಂಗಿತವನ್ನು ಅರಿಯದೆ, ತಮ್ಮ ಮತೀಯತೆಯನ್ನೇ ಮುಂದುಮಾಡಿ ಪರಿಷ್ಕರಿಸುವಲ್ಲಿ, ಮೂಲಕೃತಿಯ ಮತ್ತು ಅದರ ಕರ್ತೃವಿನ ಬಂಧಕ್ಕೆ ಮತ್ತು ಒಪ್ಪಂದಕ್ಕೆ ಅಪಚಾರ ಮಾಡಿರುವರು–ಆಮೇಲೆ ಬಂದ ಮೂವರೂ ಶೂನ್ಯಸಂಪಾದನಕಾರರು.

ಎಲ್ಲಕ್ಕಿಂತ ಹೆಚ್ಚು ಶೋಚನೀಯವಾದ ವಿಚಾರವೆಂದರೆ ಇಡಿಯಾಗಿ ಶೂನ್ಯಸಂಪಾದನಕಾರರು ವಚನಗಳ ಪಾಠದ ಪಾವಿತ್ರ್ಯವನ್ನು ಕಾಪಾಡಿಕೊಂಡು ಬರಲಿಲ್ಲ. ವಚನಗಳನ್ನು ಸಂಭಾಷಣೆಗೆ ಹೊಂದಿಸುವಲ್ಲಿ ಅಲ್ಪಾಂಶದಲ್ಲಿ ಇದು

ಅನಿವಾರ್ಯವೆಂದು ಒಪ್ಪಬಹುದಾದರೂ, ಶರಣರ ವಚನಗಳನ್ನು ಸ್ವೇಚ್ಛೆಯಾಗಿ ತಿರಿಚುವುದೊಂದು ಪಾಪ ಕಾರ್ಯ. ಈ ಮಾತು ಶಿವಗಣಪ್ರಸಾದಿಗೆ ಅಷ್ಟಾಗಿ ಅನ್ವಯಿಸದಿದ್ದರೂ ಹಲಗೆಯಾರ್ಯನಿಗೆ ಏನೇನೂ ಸಾಲದೆನಿಸುವುದು.

ಗುಮ್ಮಳಾಪುರದ ಸಿದ್ಧಲಿಂಗ ಮತ್ತು ಸಿದ್ಧವೀರರು ಶರಣರ ವಚನಗಳಲ್ಲಿ ಹಲಗೆಯಾರ್ಯನಷ್ಟು ಪ್ರಕ್ಷೇಪಮಾಡದೆ ಶಿವಗಣಪ್ರಸಾದಿಯಲ್ಲಿರುವ ಮೂಲಪಾಠವನ್ನೇ ಮತ್ತೆ ಬಳಕೆಗೆ ತರಲು ಪ್ರಯತ್ನಿಸಿರುವವರಾದರೂ–ಅವರ ಪ್ರಜ್ಞೆಗೇ ಮೀರಿ ತಮಗಿಂತ ಹಿಂದಿನವರು ಪ್ರವರ್ತಿಸಿದ ಪ್ರಕ್ಷೇಪಗಳಲ್ಲಿ ಕೆಲವು ಸಿದ್ಧಲಿಂಗ ಮತ್ತು ಸಿದ್ಧವೀರರ ಶೂನ್ಯಸಂಪಾದನೆಗಳಲ್ಲಿ ಸೇರಿಕೊಂಡಿವೆ.

ಮಹಾದೇವಯ್ಯನು ತನ್ನ ಶೂನ್ಯಸಂಪಾದನೆಯನ್ನು ಕಥಾಪ್ರಸಂಗಗಳಿಗೆ ತಕ್ಕಂತೆ ಉಪಸಂಪಾದನೆಗಳನ್ನಾಗಿ ವಿಭಾಗಿಸಲಿಲ್ಲ. ಅದು ಇಡಿಯಾಗಿ ಒಂದು. ಬಳಸಿರುವ ವಚನಗಳ ಅನುಕ್ರಮಾಂಕವು ಪ್ರಾರಂಭದಿಂದ ಮುಕ್ತಾಯದವರೆಗೆ ಅಖಂಡವಾಗಿ ಮುಂದುವರಿಯುವುದು. ಇದನ್ನೇ ಹಲಗೆಯಾರ್ಯ ಮತ್ತು ಗುಮ್ಮಳಾಪುರದ ಸಿದ್ಧಲಿಂಗ ಅನುಸರಿಸಿರುವರು. ಆದರೆ ಇವರು ಹೊಸದಾಗಿ ಸೇರಿಸಿರುವ ಮತ್ತು ಬದಲಾಗಿ ಪ್ರತಿ ನಿಧಾನಿಸಿರುವ ವಚನಗಳಿಂದಾಗಿ–ಒಂದೇ ವಚನವು ಮೂರೂ ಅಥವಾ ನಾಲ್ಕೂ ಶೂನ್ಯಸಂಪಾದನೆಗಳಲ್ಲಿ ಇದ್ದರೂ–ಅಲ್ಲಿ ಅವುಗಳ ಕ್ರಮಾಂಕವು ಭಿನ್ನಭಿನ್ನವಾಗಿರುವುದು ಅನಿವಾರ್ಯ.

ಈ ಅಖಂಡ ಪ್ರವಾಹಸದೃಶವಾದ ಕಥಾಪೂರವು ಸುಲಭಗಮ್ಯವಾಗಲೆಂದು ಅದನ್ನು ಗೂಳೂರು ಸಿದ್ಧವೀರನು ಹಲವಾರು ಪರಿಚ್ಛೇದಗಳಾಗಿ ವಿಂಗಡಿಸಿ, ಪ್ರತಿಯೊಂದು ಪರಿಚ್ಛೇದ(ಉಪಸಂಪಾದನ)ದ ಆದಿ ಅಂತ್ಯಗಳಲ್ಲಿ ಕಂದ–ಒಕ್ಕಣೆಗಳೆಂಬ ಎಲ್ಲೆ ಕಲ್ಲುಗಳನ್ನು ನಟ್ಟನು.

**ಗ್ರಂಥಸಂಪಾದನೆ:**

ಶಿವಗಣಪ್ರಸಾದಿ ಮಹಾದೇವಯ್ಯನ ಈ ಪ್ರಭುದೇವರ ಶೂನ್ಯಸಂಪಾದನೆಯೆಂಬ ಈ ಗ್ರಂಥವನ್ನು ಪರಿಷ್ಕರಿಸಲು ಈ ಕೆಳಕಂಡ ಓಲೆಯ ಮತ್ತು ಕಾಗದದ ಪ್ರತಿಗಳನ್ನು ಬಳಸಿಕೊಳ್ಳಲಾಗಿದೆ:

1. K. 1022 (=ಶಿ), ಇದು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿಯಲ್ಲಿರುವ ಓಲೆಯ ಪ್ರತಿ. ಇದು ಸಮಗ್ರವಾಗಿದ್ದರೂ–ಮೊದಲಲ್ಲಿ ಮತ್ತು ಅಲ್ಲಲ್ಲಿ ಕೆಲವು ಗರಿಗಳು ನಷ್ಟವಾಗಿ ಹೋಗಿವೆ. ಇದರಲ್ಲಿ ಶಕಟರೇಫದ ಬಳಕೆಯಿದ್ದು–ಅದು ಸರಿಯಾಗಿದೆ. ಹಲವಾರು ಲಿಪಿಕಾರ ಸ್ಖಾಲಿತ್ಯಗಳಿದ್ದರೂ–ಇದಕ್ಕೆ ಮೂಲವಾಗಿದ್ದ

ಪ್ರತಿ ಕವಿಪ್ರತಿಗೆ ಬಹಳ ಸಮೀಪವಾದುದೆನಿಸುವುದು: "ಸಾಧಾರಣ ಸಂವತ್ಸರದ ಮಾರ್ಗಶಿರ ಶು. 10ರಲ್ಲೂ ಚೆನ್ನವರದ ಬಸಪ್ಪಯ್ಯನವರಿಗೆ ಗುಮ್ಮಹಾಳಪುರದ ಬರಹದ ಬಸವಣ್ಣ ದೇವರು ಬರೆದ" ಪ್ರತಿಯಿದು.

2. ಶ್ರೀ ಎಚ್. ದೇವಿರಪ್ಪ, ಎಂ.ಎ., ಅವರಿಂದ ಎರವಲು ತಂದ ಒಂದು ಓಲೆಯ ಗ್ರಂಥ "ದೇ'. ಇದರಲ್ಲಿ ಶಿವಗಣಪ್ರಸಾದಿ ಮಹಾದೇವಯ್ಯನ ಶೂನ್ಯಸಂಪಾದನೆಯ 485ನೇ ವಚನದವರೆಗಿನ ಗ್ರಂಥಭಾಗ ಮಾತ್ರವಿದ್ದು–ಉಳಿದದ್ದು ನಷ್ಟವಾಗಿ ಹೋಗಿದೆ. ಇದು ಅಷ್ಟು ಉತ್ತಮವಾದ ಪ್ರತಿಯಲ್ಲದಿದ್ದರೂ ಶಿಪ್ರತಿಯಲ್ಲಿ ನಷ್ಟವಾಗಿದ್ದ ಭಾಗಗಳನ್ನೆಲ್ಲಾ ಇದರಿಂದ ತುಂಬಿಕೊಳ್ಳಲು ಸಾಧ್ಯವಾಯಿತು.

3. K. A 105 (=ಹ) ಇದೂ ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿಯಲ್ಲಿನ ಕಾಗದದ ಪ್ರತಿ. ಇದು ಶಿವಗಣಪ್ರಸಾದಿ ಮಹಾದೇವಯ್ಯನ ಶೂನ್ಯಸಂಪಾದನೆಯ ಪ್ರತಿಯಲ್ಲ–ಹಲಗೆಯದೇವರ ಶೂನ್ಯಸಂಪಾದನೆಯ ಏಕೈಕ ಪ್ರತಿ. ಇದರಲ್ಲಿ ಶಿವಗಣಪ್ರಸಾದಿ ತನ್ನ ಶೂನ್ಯಸಂಪಾದನೆಗೆ ಬಳಸಿಕೊಂಡಿರುವ ವಚನಗಳೆಲ್ಲಾ ದೊರೆಯುವವು. ಈ ಹಲಗೆಯಾರ್ಯನ ಶೂನ್ಯಸಂಪಾದನೆಯ ಪ್ರತಿಯಲ್ಲಿ "ಶಿ" ಪ್ರತಿಯ ಪಾಠಗಳೆಲ್ಲ ಅಡಕವಾಗಿದ್ದು ಮೇಲಿಷ್ಟು ಪ್ರಕ್ಷಿಪ್ತ ಪಾಠಗಳು ಸೇರಿವೆ. ಈ ಮಿಶ್ರಣ ಸರಳವಾಗಿದ್ದು–ಶಿಪ್ರತಿಯ ಸಹಾಯದಿಂದ ಶಿವಗಣಪ್ರಸಾದಿಯ ಮೂಲಪಾಠವನ್ನು ಬೇರ್ಪಡಿಸಿಕೊಳ್ಳುವುದು ಸುಲಭ:

ಆಡಿ ಕಾಲು ದಣಿಯವು. ನೋಡಿ ಕಣ್ಣು ದಣಿಯವು. ಹಾಡಿ (ಬಾಯಿ =) ಮನ ದಣಿಯದಿನ್ನೇವನಿನ್ನೇವನಯ್ಯ, ನಿಮ್ಮ (= ನಿಮ್ಮುವ) ಕೈಮುಟ್ಟಿ ಪೂಜಿಸಿ ಮನ (= ಕೈ) ದಣಿಯಲೊಲ್ಲದಿನ್ನೆವೆ (+ ನಿನ್ನೇವೆ. ನಿಮ್ಮ ಮೂರುತಿ ಧ್ಯಾನದಿಂದೆನ್ನ ಮನ ನೆನೆನೆನೆದು ಎನ್ನ ಮನದಣಿಯಲೊಲ್ಲದಿನ್ನೇವೆನಿನ್ನೇವೆ. ) ಕೂಡಲಸಂಗಮದೇವ ನಿಮ್ಮ ಉದರವ ಬಗಿದು ಹೊಗುವ ಭರವಸವೆನಗೆ, (ಶಿ, 713, ಹ 1283).


Note: ಕಂಸಾಂತರ್ಗತವಾದ ಪಾಠ ಹಲಗೆಯದೇವನ ಶೂನ್ಯಸಂಪಾದನೆಯದು; ಉಳಿದುದು ಶಿವಗಣಪ್ರಸಾದಿಯದು.

4. ದಾವಣಗೆರೆಯ D.R.M. ಕಾಲೇಜಿನ ಕನ್ನಡ ಉಪಾಧ್ಯಾಯರಾದ ಶ್ರೀಯುತ ಉಮಾಪತಿ ಎಂ.ಎ., ಅವರು ಕೃಪೆಯಿಟ್ಟು ಕೊಟ್ಟ ಗೂಳೂರು ಸಿದ್ಧವೀರನ ಶೂನ್ಯಸಂಪಾದನೆಯ ಕೋರಿ ಕಾಗದದ ಪ್ರತಿ (= ಉ).

5. ಪ್ರೊ. ಸಂ. ಶಿ. ಭೂಸನೂರುಮಠ ಎಂ. ಎ., ಅವರು ಸಂಪಾದಿಸಿ ಕ್ರಿ.ಶ.

1958ರಲ್ಲಿ ಪ್ರಕಟಿಸಿದ “ಗೂಳೂರು ಸಿದ್ದವೀರಣ್ಣೊಡೆಯರು ಸಂಗ್ರಹಿಸಿದ ಪ್ರಭುದೇವರ ಶೂನ್ಯಸಂಪಾದನೆ” (=ಗೂ), ಇದರಲ್ಲಿನ ಪಾಠಗಳನ್ನು “ಗೂ” ಎಂಬ, ಪಾಠಾಂತರಗಳನ್ನು “ಗೂ R” ಎಂಬ ಸಂಕೇತದಿಂದ ಸೂಚಿಸಲಾಗಿದೆ.

ಮೇಲಣ ಐದು ಸಾಮಗ್ರಿಗಳನ್ನು ಬಳಸಿಕೊಂಡು ಈ ಶಿವಗಣಪ್ರಸಾದಿಯ ಪ್ರಭುದೇವರ ಶೂನ್ಯಸಂಪಾದನೆಯನ್ನು ಸಂಪಾದಿಸಲಾಗಿದೆ. ಮೇಲಣ ಪ್ರತಿಗಳ ಪರಸ್ಪರ ಸಂಬಂಧವನ್ನು ಮುಂದಣ ರೇಖಾಚಿತ್ರದಿಂದ ತೋರಿಸಿದೆ:




ಉ ಪ್ರತಿಯ ಅಥವಾ ಗೂ ಪ್ರತಿಯ ಪಾಠವನ್ನು ನಾನು ಬಹಳ ಎಚ್ಚರಿಕೆಯಿಂದ ವಿಷವನ್ನು ವೈದ್ಯಕ್ಕೆ ಬಳಸಿದಂತೆ ಬಳಸಿಕೊಂಡಿದ್ದೇನೆ. ಏಕೆಂದರೆ ಆ ಪ್ರತಿಗಳು ನನ್ನ ಅಭಿಪ್ರಾಯದಲ್ಲಿ ಮಿಶ್ರ ಪ್ರತಿಗಳು. (ಗುಮ್ಮಳಾಪುರದ ಸಿದ್ಧಲಿಂಗನ ಶೂನ್ಯಸಂಪಾದನೆಯ ಪ್ರತಿಗಳಿಗೂ ಇದೇ ಮಾತು ಅನ್ವಯಿಸುವುದು). ಮುಂದಿನ ವಚನವನ್ನು ಪರಿಶೀಲಿಸಿ:

I. ನೀನಳವಡಿಸಿ[7] ಕೊಟ್ಟ ಪದಾರ್ಥ ನಿಮಗರ್ಪಿತವಯ್ಯ, ನಿಮ್ಮ ಆರೋಗಣೆ ಮಹಾ ಆರೋಗಣೆ, ಸಕಲ ಗಣಂಗಳಿಗೆ[8] ಹಿತಾರ್ಥ[9] ಕೂಡಲಚೆನ್ನಸಂಗಮದೇವ ನಿನಗೆ ಕ್ಷುತ್ತಿಲ್ಲಾಗಿ[10] ನಾನು ಅರ್ಪಿತವ ಮಾಡಲಿಲ್ಲಯ್ಯ.[11]

II. ಬಸುಱೆ ಬಾಯಾಗಿ, ಬಾಯೆ ಬಸುಱಾಗಿ ಇಪ್ಪುದ ತೊಡೆದ, ಕಣ್ಣೆ ತಲೆಯಾಗಿ, ತಲೆಯ ಕಣ್ಣಾಗಿರಿಸಿದ. ಕಾಲೆ ಕೈಯಾಗಿ, ಕೈಯೆ ಕಾಲಾಗಿ ನಡೆಸಿದ. ನೆಳಲ ಸುಟ್ಟು ಉಡುಗೊಱೆಯನೆನಗೆ[12] ಕೊಟ್ಟನು. ಮಥನವಿಲ್ಲದ ಸಂಗಸುಖವ

ನನಗೆ ತೋಱಿಸಿದನು. ಕೂಡಲಸಂಗಮದೇವ, ಪ್ರಭುವಿನ[13] ಶ್ರೀಪಾದಕ್ಕೆ ಶರಣೆನುತ್ತಿದ್ದನು. 833–1411–1224–19–95.

Note: ಮೇಲಣ ಎರಡು ವಚನಗಳಿಗೆ ಕೊಟ್ಟಿರುವ ಪಾಠಾಂತರಗಳಿಂದ–ಶಿಯ ಶುದ್ಧಪಾಠವನ್ನು ಬಿಟ್ಟು ಹಲಗೆಯಾರ್ಯನ ಪ್ರಕ್ಷಿಪ್ತ ಪಾಠಗಳನ್ನು ಗುಮ್ಮಳಾಪುರದ ಸಿದ್ದಲಿಂಗ ಮತ್ತು ಗೂಳೂರು ಸಿದ್ಧವೀರರು ಹೇಗೆ ತಮ್ಮ ಶೂನ್ಯಸಂಪಾದನೆಗಳೊಳಕ್ಕೆ ಸ್ವೇಚ್ಛೆಯಾಗಿ ಮಿಶ್ರಣ ಮಾಡಿಕೊಳ್ಳುತ್ತಿರುವರೆಂಬುದನ್ನು ಕಾಣಬಹುದು. ಆದುದರಿಂದಲೇ ನಾನು ಪ್ರಸುತ್ತ ಗ್ರಂಥವನ್ನು ಪರಿಷ್ಕರಿಸುವಲ್ಲಿ ಗೂಳೂರು ಸಿದ್ಧವೀರನ ಶೂನ್ಯಸಂಪಾದನೆಯ ಪಾಠಗಳನ್ನು ಗುಮಾನಿಯಿಂದಲೇ ನೋಡುತ್ತ ಬಂದಿರುವೆನು. ಒಂದು ಪಕ್ಷ ಗುಮ್ಮಳಾಪುರದ ಸಿದ್ಧಲಿಂಗನ ಶೂನ್ಯಸಂಪಾದನೆಯ ಪ್ರತಿಗಳು ನನಗೆ ಸಕಾಲದಲ್ಲಿ ಒದಗಿಬಂದಿದ್ದರೆ ಕೂಡ ಹಾಗೇ ಮಾಡುತ್ತಿದ್ದೆನು. (ಆದರೆ ನನಗೆ ಅವು ದೊರೆತುದು ನನ್ನ ಗ್ರಂಥಪರಿಷ್ಕರಣವನ್ನೆಲ್ಲ ಮುಗಿಸಿ ಮುನ್ನುಡಿಯನ್ನು ಬರೆಯುತ್ತಿದ್ದಾಗ.)

ಆದುದರಿಂದ ನಾನು ಮುಖ್ಯವಾಗಿ ಎರಡು ಮೂರು ಪ್ರತಿಗಳ ಆಧಾರದಿಂದ ಪ್ರಸ್ತುತ ಗ್ರಂಥವನ್ನು ಪರಿಷ್ಕರಿಸಿರುವೆನೆಂಬುದನ್ನು ಮತ್ತೊಮ್ಮೆ ಹೇಳಲಿಚ್ಛಿಸುತ್ತೇನೆ.

ಒಟ್ಟಿನಲ್ಲಿ ಈ ನನ್ನ ಸಂಪಾದನಕಾರ್ಯ–ರಾಗಿಹಿಟ್ಟು, ಕೀರೆಸೊಪ್ಪು, ಸಮುದ್ರದ ಉಪ್ಪು–ಈ ಪರಿಮಿತ ಸಾಮಗ್ರಿಗಳಿಂದ ಸಿದ್ಧಗೊಂಡ ಮೋಳಿಗೆ ಮಾರಯ್ಯನ ಮನೆಯ ಅಡಿಗೆಯಂತಿದೆ. ಅಂದು ಅದರಿಂದ ಬಸವಣ್ಣ ತೃಪ್ತಿಪಟ್ಟಿದ್ದಾನೆ. ಇಂದು ಇದರಿಂದ ಅವನೂ, ಅವನ ಅನುಯಾಯಿಗಳೂ ತೃಪ್ತರಾಗುವರೆಂದು ನಂಬಿದ್ದೇನೆ:

“ಶಿವಯೋಗಿನಿ ಸಂತೃಪ್ತೇ ತೃಪ್ತೋ ಭವತಿ ಚರಾಚರಂ” ಎಂಬುದೇ ನನ್ನ ವಿಶ್ವಾಸ.

**ಅಡಿಟಿಪ್ಪಣಿಗಳು:**

1. ಸಿಂಗಿರಾಜನಿಗೇ ಲಕ್ಕಣ್ಣನು ಮೂಲವೆಂದು ಹೇಳುವುದುಂಟು. ಇದು ಸಮಂಜಸವಲ್ಲ. ಲಕ್ಕಣ್ಣ ಮತ್ತು ಸಿಂಗಿರಾಜರ ಕೃತಿಗಳಲ್ಲಿ ಸಾದೃಶ್ಯವಿರುವುದರಿಂದ ಯಾರಿಗೆ ಯಾರು ಮೂಲವೆಂಬುದು ತೊಡಕಿನ ಪ್ರಶ್ನೆ. ಏಕೆಂದರೆ ನಮಗೆ ಲಕ್ಕಣ್ಣನ ಕಾಲ ತಿಳಿದಿದ್ದು ಸಿಂಗಿರಾಜನ ಕಾಲ ತಿಳಿಯದು. ಅಂದಾಕ್ಷಣಕ್ಕೆ ಖಚಿತವಾದ ಒಂದು ಕಾಲದಲ್ಲಿದ್ದ ಲಕ್ಕಣ್ಣನಿಗಿಂತ ಈಚೆಗೆ ಕಾಲ ತಿಳಿಯದ ಸಿಂಗಿರಾಜನನ್ನು ಎಳೆದುಹಾಕುವುದು ಸರಿಯಲ್ಲ. ಸಿಂಗಿರಾಜನಿಗೆ ಲಕ್ಕಣ್ಣನಿಗಿಲ್ಲದ ಒಂದು ಸ್ವತಂತ್ರ ಸಶಕ್ತ ಶೈಲಿಯಿತ್ತು. ಮೇಲಾಗಿ ಲಕ್ಕಣ್ಣ ಸಂಗ್ರಹಕಾರನೇ ಹೊರತು ಸ್ವತಂತ್ರ ಸಾಮರ್ಥ್ಯದವನಲ್ಲ. ಅವನ ಕೃತಿ ಪರಿಶೀಲನೆಯಿಂದ ಇದನ್ನು ಮನಗಾಣಬಹುದು.

   ಶಿವತತ್ವ ಚಿಂತಾಮಣಿಯನ್ನು ಮೂರು ಭಾಗ ಮಾಡಬಹುದು:

   1. ಶಿವನ ಲೀಲೆಗಳ ಸಂಗ್ರಹ.
   2. ಬಸವಾದಿ ಪ್ರಾಚೀನರಿಂದ ಹಿಡಿದು ನೂತನಗಣಂಗಳವರೆಗಿನ ಅವರ ಕಥಾಸಂಗ್ರಹ.
   3. ಷಟ್ಸ್ಥಲ ವಿಚಾರವನ್ನು ಒಳಗೊಂಡ ತತ್ವ ಮತ್ತು ಆಚರಣೆಯ ನಿರೂಪಣೆ.

   ಲೀಲೆಗಳನ್ನು ಹೇಳುವಲ್ಲಿ ಲಕ್ಕಣ್ಣನು ಸ್ಕಾಂದಾದಿಪುರಾಣಗಳಿಂದ ಅನುವಾದಿಸುತ್ತಿರುವನೆಂಬುದು ಅವನ ಸೂಚನೆಯ ಪದ್ಯಗಳಲ್ಲೇ ಸ್ಪಷ್ಟವಾಗಿದೆ.

   ತತ್ವ ಮತ್ತು ಆಚರಣೆಯ ಸಂಬಂಧವಾದ ದೀಕ್ಷಾ (ಮುಂತಾದ) ವಿಚಾರವನ್ನು ವಾತೂಳ ಮುಂತಾದ ಆಗಮಗಳಿಂದ ಸಂಗ್ರಹಿಸಿದಂತೆ ಆತನೇ ಹೇಳಿಕೊಂಡಿದ್ದಾನೆ.

   ಇನ್ನು ಇವೆರಡರ ಮಧ್ಯೆ ಬರುವ 'ಭುವನಕೋಶ' ಪರಿಚ್ಛೇದದಿಂದ ಹಿಡಿದು 'ನೂತನಗಣಂಗಳ ಕಥೆ' ಎಂಬ ಪರಿಚ್ಛೇದದವರೆಗಿನ ವಸ್ತುವಿಗೆ ಮೂಲದ ವಿಚಾರ: ಭುವನಕೋಶವನ್ನು ಲಿಂಗಪುರಾಣದಿಂದಲೂ, ಶಿವಲೋಕ ವಿಸ್ತಾರವನ್ನು ಶಿವಪುರಾಣದ ರುದ್ರಕೋಟಿ ಸಂಹಿತೆಯಿಂದಲೂ ಸಂಗ್ರಹಿಸಿ ಅನುವಾದ ಮಾಡಿರುವಂತೆ ಲಕ್ಕಣ್ಣನು ಸ್ಪಷ್ಟವಾಗಿ ಹೇಳಿಕೊಂಡಿರುವನು. ಆದರೆ ಮುಂದೆ ಬರುವ 'ಬಸವೇಶ್ವರನ ಜನನ'ದಿಂದ ಹಿಡಿದು 'ಮೀಮಾಂಸಕನ ಪವಾಡ'ದ ವರೆಗಿನ ಬಸವಣ್ಣನ ಕಥೆಯನ್ನು ಅವನು ಎಲ್ಲಿಂದ ಸಂಗ್ರಹಿಸಿರುವನೋ ಉದ್ದೇಶಪೂರ್ವಕವಾಗಿಯೇ ಹೇಳದೆ ಬಿಟ್ಟಂತಿದೆ. ಆದರೇನು ಅವನಿಗೆ ಸಿಂಗಿರಾಜನೇ ಮೂಲವೆಂಬುದು ಈ ಕೆಳಗಿನ ಉಲ್ಲೇಖಗಳನ್ನು ತಾಳೆನೋಡುವುದರಿಂದ ನಿರ್ಣಯಿಸಬಹುದು. ಈ ಸಮಯದಲ್ಲಿ ಸಿಂಗಿರಾಜನಿಗಿದ್ದ ಸ್ವತಂತ್ರ "ಕವಿ"ತ್ವವು ಶಿವತತ್ವ ಚಿಂತಾಮಣಿಯ ಕರ್ತೃವಿಗೆ ಇರಲಿಲ್ಲವೆಂಬುದನ್ನು ಮರೆಯಬಾರದು:

   (1) .....ಪದಿನೆಂಟು ಮಂತ್ರಮುಖ
   ದಾದ್ಯರಿಗೆ ತಿಳಿಪುತ್ತಿರಲ್ಕುತ್ತರಾಶೆಯಿಂ
   ಶೀಧರನೆನಿಪೊಬ್ಬ ಮೀಮಾಂಸಕಾಚಾರ್ಯ ಬಂದನಾಡಂಬರದೊಳು (ಸಿಂ. ಪು. 27–3)

   ....ಪದಿನೆಂಟು ಮಂತ್ರಿಮುಖದವರುಗಳ ಲೆಕ್ಕಂಗಳ

ತಂದೋದಿಸಲು ಶ್ರೀಧರಾಚಾರ್ಯನುಂ ಬಡಗ
ಣಿಂದ ಮೀಮಾಂಸಕನೆನಿಪ್ಪ ಪೆಸರೊಪ್ಪಿ ಮುದ
ದಿಂದ ಬರಲದ ಪೇಳ್ವೆ– (ಶಿ.ತ. ಚಿಂ. 33–1)

(2) ತರ್ಕಮೀಮಾಂಸಕಾಚಾರಿಯಗೆ ಚಾಮರವ
ನಿಕ್ಕುವನ ಪೆಸರ್‌ಶೈವ, ಹಡಪಿ ವೈಷ್ಣವ, ಗದ್ದು
ಗಿಕ್ಕುವನ ಪೆಸರಾರುಹತ, ಪಾದುಕೆಯ ಪಿಡಿವವನ ಪೆಸರ್‌ಬೌದ್ಧ ಮುಂದೆ
ಸಿಂ. ಪು. 27–7)

ಆಸನಿಕ್ಕುವನು ಶೈವ, ಚಾಮರವನುಜೆ
ಬೀಸುವಂ ವೈಷ್ಣವಂ, ಬೊಕ್ಕಸದನಾರುಹತ,
ಲೇಸ ಕೊಂಡಾಡಿ ಪೊಗಳುವನು ಕಾಪಾಲಿ, ಪಾವುಗೆಯವಂ ವರಸೌರನು
(ಶಿ.ತ. ಚಿಂ. 33–3)

(3) ಆಱು ದರುಶನದರಸು ಬರೆ ಕುಳ್ಳಿದೇಳದಿಹ
ನಾರಿವಂ ಭಸ್ಮಧರ ಶೈವಪಾಷಂಡಿ? ಎನ
ಲಾರೈದು ಸಚಿವರಿವರೆಮ್ಮ ಭರಭಾರಕರು ಮೇಲೆ ಸಾಮರ್ಥ್ಯರು ಸದಾ
ಚಾರಿ ಬಸವೇಶರೆನಲಿಂತೀತನುತ್ಕೋಚಿ
ಮೀಱಿದ ಶರಣನೆಂದು ಕೇಳಿಹವು ಕೆಲಭ್ರಷ್ಟ
ಗಾರಸಿದ್ಧಾಂತಗಳ ನಟಿಸುತಿಹನೀತನೇ ಅಂತಲಾಗರ್ವದವನು (ಸಿಂ. ಪು. 27–11)

ಇವನಾರು ಬಿಜ್ಜಳ ಮಹೀಪಾಲ ಮೆಯ್ಗೆ ಭ
ಸ್ಮವ ಪೂಸಿಕೊಂಡಿರ್ದ ಶೈವಪಾಷಂಡಿ? ಎನ
ಲವನಿಪನು ನುಡಿದನೀತನು ಬಸವದಂಡೇಶ ಶಿವಭಕ್ತಿಭರಿತನೆನಲು
ಇವನ ಬಲ್ಲೆವು ನಾಸ್ತಿಕನು ಶಿವನೆ ದೈವವೆಂ
ದವಗಡಿಸಿ ನುಡಿವುತಿಹನಿವ ಶುಷ್ಕ ತರ್ಕಿ ಮ
ತ್ತಿವನಹಂಕಾರಿ ಬಲುಗರ್ವಿಯೆನೆ.... (ಶಿ.ತ. ಚಿಂ. 33–5)

(4) ...ಶಿವನ ನಿಂದಿಪ ಪಾಪ
ಕರ್ಮಿಗಳ ಕಾಣುತಾಕ್ಷಣ ಶಿರವನರಿದು ರಸನ
ನಿರ್ಮೂಲ ಮಾಡಬೇಕಲ್ಲದೊಡೆ ನಿಜತನುವ ತ್ಯಜಿಪಾಗಮವ ಕೇಳ್ ನೃಪ ಶ್ರುತಿ
ಶ್ರುತ್ವಾನಿಂದಾಂ ಶಿವಸ್ಯಾಥ ತತ್‌ಕ್ಷಣಾದ್ದೈಹಿಕಂ ತ್ಯಜೇತ್ ।
ಸ್ವದೇಹಂ ವಾ ನಿಹತ್ಯಾಶು ರುದ್ರಲೋಕಂ ಸ ಗಚ್ಛತಿ ॥
ಯೋ ವಾ ಚೋತ್ಪಾಟಯೇತ್ ಜಿಹ್ವಾಂ ಶಿವನಿಂದಾರತಸ್ಯ ತು ।
ತ್ರಿಸಪ್ತ ಕುಲಮುದ್ಧೃತ್ಯ ಶಿವಲೋಕಂ ಸ ಗಚ್ಛತಿ ॥ (ಸಿಂ. ಪು. 27–29)

...ಶಿವನಿಂದ ಮಾಳ್ಪನ ಕೊಲ್ವು
ದಸುವನುಳಿವುದು ಹಿತಂ ಸ್ಮೃತಿಯನಱೆ....
ಶ್ರುತಾನಿಂದಾಂ ಶಿವಸ್ಯಾಥ ತತ್ಕ್ಷಣಾದ್ದೈಹಿಕಂ ತ್ಯಜೇತ್ ।
ಸ್ವದೇಹಂ ವಾ ನಿಹತ್ಯಾಶು ರುದ್ರಲೋಕಂ ಸ ಗಚ್ಛತಿ ॥
ಯೋ ವಾ ಚೋತ್ಪಾಟಯೇತ್ ಜಿಹ್ವಾಂ ಶಿವನಿಂದಾರತಸ್ಯ ತು।
ತ್ರಿಸಪ್ತ ಕುಲಮುದ್ಧೃತ್ಯ ಶಿವಲೋಕಂ ಸ ಗಚ್ಛತಿ ॥ (ಶಿ.ತ. ಚಿಂ. 33–13)

(5) ನೆತ್ತವಾಸಂಗಿ ಬಿದ್ದತ್ತತ್ತ ಶಬ್ದಗಳ
ಚಿತ್ರಿಸುವ ತೆಱದಿ ನಾನಾಮುಖದೊಳಿತಿಹಾಸ
ವೆತ್ತಿ ಭರ್ಗೋದೇವ ಧೀಮಹೀಯೆಂಬ ಮಂತ್ರವೆ ಮೂರ್ತಿಗೊಂಡೊಲಂತಾ
ತತ್ವತನುವಿರೆ ರಸಾವೇಶದಿಂ ಬಸವ ತಲೆ
ಸುತ್ತ ತೆಗೆದಿಕ್ಕಿದ ಜಗಕ್ಕೆ ಮುಂಡಿಗೆಯನೆ
ಮ್ಮತ್ಯತಿಷ್ಠದ್ದಶಾಂಗುಲನ ಘನವಧಿಕವೊಳರೆತ್ತೆನುತ್ತೊರೆದ ವಚನ
ವಚನ:
ದೇವಲೋಕಕ್ಕೆ ಸರಿ ಬೇಱೆ ಲೋಕವಿಲ್ಲ. ಶಿವಮಂತ್ರಕ್ಕೆ
ಸರಿ ಬೇಱೆ ಮಂತ್ರವಿಲ್ಲ, ಜಗಕ್ಕಿಕ್ಕಿದೆ ಮುಂಡಿಗೆಯನೆತ್ತಿಕೊಳ್ಳಿ
ಕೂಡಲಸಂಗಯ್ಯನಲ್ಲದೆ ಬೇಱೆ ದೈವವಿಲ್ಲ. (ಸಿಂ. ಪು. 27–57)

...ಮತ್ತೆ ಇತಿಹಾಸ ಭರ್ಗೋ ದೇವನೇ
ಈ ರೂಢಿಯೊಳು ದೈವವೆಂದು ತಲೆಸುತ್ತನತಿ
ತೋಱೆ ಮುಡಿಗೆಯನತ್ಯತಿಷ್ಠದ್ದಶಾಂಗುಲಂ
ಬೇಱೆ ದೈವವದಿಲ್ಲೆನುತ ವಚನವೆಂದ....
ದೇವಲೋಕಕ್ಕೆ ಸರಿ ಬೇಱೆ ಲೋಕವಿಲ್ಲ, ಶಿವಮಂತ್ರಕೆ ಸರಿ
ಬೇಱೆ ಮಂತ್ರವಿಲ್ಲ, ಜಗಕಿಕ್ಕಿದ ಮುಂಡಿಗೆಯನೆತ್ತಿಕೊಳ್ಳಿ ಕೂಡಲ
ಸಂಗಯ್ಯನಲ್ಲದೆ ಬೇಱೆ ದೈವವಿಲ್ಲ. (ಶಿ.ತ. ಚಿಂ. 33–26)

2. ಈ ಮುಂದೆ ಬರುವ ಸಿಂಗಿರಾಜಪುರಾಣದಲ್ಲಿನ ಪ್ರಭುದೇವರ ಪೂರ್ವವೃತ್ತಾಂತವನ್ನು ಶಿವಗಣಪ್ರಸಾದಿಯ ಶೂನ್ಯಸಂಪಾದನೆಯಲ್ಲಿನ ಕಥೆಯೊಡನೆ ಹೋಲಿಸಿ ನೋಡಿ:

ಅನ್ಯಕಥನಾಗಮದಲ್ಲಿ– "ವೃಷಭನು ಇಂದ್ರನ ಖಾಂಡವವನವನ್ನು ಹೊಕ್ಕು ಓಡಾಡಿ, ಆ ಇಂದ್ರನ ಇಕ್ಷುವಾಟಿಯನ್ನು ತುಳಿದು ಕೆಡಿಸಿ ರಕ್ಷಕರನ್ನು ಧಿಕ್ಕರಿಸಿದ. ಹೀಗೆ ಅನ್ಯಾಯವಾಯಿತೆಂದು ಶಿವನಿಗೆ ತಿಳಿಸಲು, ಆ ಶಿವನು "ವೃಷಭ, ನಿನ್ನ ಉಪಟಳಕ್ಕೆ ಅಂಜುವೆವು" ಎಂದನು. ಅದಕ್ಕೆ ಮುನಿದು ವೃಷಭನು (ಮರ್ತ್ಯಲೋಕಕ್ಕೆ) ಹೋದ"

ಎಂಬುದು ಸರಿಯಲ್ಲ (2–40).

ಕ್ರಿಯೆ ಮತ್ತು ಭಾವ ಈ ಎರಡೂ ವಾದಿಸುತ್ತ ಶಿವನ ಬಳಿ ಬಂದು ಪರಸ್ಪರ ಮೂದಲಿಸುತ್ತಿರಲು, ವೃಷಭನು ನ್ಯಾಯತೀರ್ಮಾನ ಮಾಡಲೆಂದು ಶಿವನು ಹೇಳಿದ. ಕೂಡಲೆ ಭಾವವು ವೃಷಭನ ಮುಖವನ್ನೂ, ಕ್ರೀ ದೇವತೆಗಳ ಮುಖವನ್ನೂ ಪ್ರವೇಶಿಸಿದವು (2–41).

ಕ್ರಿಯೆಗೆ ಕೃತಕಬುದ್ಧಿ ಬಂದಿತು. ಅದು ಅನಿಮಿಷ ಎಂಬ ಕ್ರತುಪುರುಷನ ಕೈಯಿಂದ ವೃಷಭನ ಬಾಲದ ಕೊನೆಯ ಒಂದು ರೋಮವನ್ನು ಹಿಡಿದಲುಗಾಡಿಸಿತು (2–42).

ವೃಷಭನು ಬಾಲವನ್ನೆತ್ತಿ ಬಡಿಯಲು ಇಂದ್ರ ಅಗ್ನಿ ಮುಂತಾದವರು ನೊಂದು "ಶಿವನ ಆಟ ತಿಳಿಯುವುದು ಅಸಾಧ್ಯ. ಬುವಿ–ಬಾನಲ್ಲೆಲ್ಲೂ ಕರಿ–ತುರಗ ರಥ ಮುಂತಾದ ವಾಹನಗಳಿಲ್ಲವೆಂಬಂತೆ ಈ ಎತ್ತನ್ನು ಸಿಂಗಾರಮಾಡಿಟ್ಟುಕೊಂಡಿದ್ದಾನೆ. ಇದಾದರೋ ದೇವಾಧಿದೇವತೆಗಳ ಮುಖಭಂಗಮಾಡುತ್ತಿದೆ" ಎಂದರು (2 = 43–44).

ಶಿವನು ಸರ್ವಾಂತರ್ಯಾಮಿಯಾಗಿದ್ದೂ ಈ ಮಾತನಾಡಿಸಿದನೇ–ಎಂದು ನೊಂದು, ಈ ಇಂದ್ರಗಿಂದ್ರರನ್ನು ನೋಡಿಕೊಳ್ಳುವೆನೆನ್ನುತ್ತ ವೃಷಭನು ಗೋಪ್ಯವಾಗಿ ಹೊರಟು, ಕೀಲಕಪರ್ವತದ ಶಿಖರದಲ್ಲಿ ನಿಂತು, ನಾಲ್ಕೂ ದಿಕ್ಕನ್ನು ಉಗ್ರವಾಗಿ ನೋಡಿದ (2–45).

ದಿಗ್ಬಂಧವಾಯಿತು. ಚಂದ್ರ ಸೂರ್ಯರು ಗತಿಗೆಟ್ಟರು. ದೇವಾಧಿದೇವತೆಗಳ ಸಿದ್ಧರಸ ಒಣಗಿಹೋಯಿತು. ಕಲ್ಪತರು, ಪರುಷ, ಚಿಂತಾಮಣಿಗಳು ನಿಷ್ಪ್ರಯೋಜಕವಾದವು. ಭೂಮಿಯಲ್ಲಿ ಹರಿಯುವ ನೀರು ಹಿಂಗಿತು, ಸುರಿವ ಮಳೆ ನಿಂತಿತು, ಕರೆವ ಹಸು ಮಾನಸಿಕೊಂಡಿತು (2=46–48).

ಈ ಉಗ್ರ ಪರಿಸ್ಥಿತಿಯ ವಾರ್ತೆ ಇಂದ್ರನಿಗೂ, ನಾರಾಯಣನಿಗೂ, ಶಿವನಿಗೂ ತಲುಪಿತು (2–49).

ಇಂದ್ರನೇ ಇದಕ್ಕೆಲ್ಲಾ ಮೂಲಕಾರಣವೆಂದು ಶಿವನು ತಿಳಿದು ಅವನನ್ನು ಕರೆದು–ವೃಷಭನನ್ನು ಕೈಲಾಸಕ್ಕೆ ಕರೆದು ತಾ ಇಲ್ಲದಿದ್ದರೆ–ಸಾಯುವ–ಎಂದು ಗದರಿಸುವನು (3–3).

ಇಂದ್ರನ ಕಡೆಯವರು ವೃಷಭನನ್ನು ಹುಡುಕಿ ಹಿಡಿದುತರುವ ರಭಸದಲ್ಲಿ ಹೊರಡುವರು (3 = 13–15) ವೃಷಭನನ್ನು ಕಂಡು, ಎಳೆತರಲು ಹೆಣಗಿ, ನೋವು ತಿಂದು ಹಿಂತಿರುಗುವರು (3=16–21).

ಇತ್ತ ವೃಷಭನ ಕೋಪಾಗ್ನಿ ಭೂಮಂಡಲವನ್ನು ಸುಡುತ್ತ ಬರುವುದು. ಇದನ್ನೆಲ್ಲ ಹರಿ–ಹರ–ಬ್ರಹ್ಮರಿಗೆ ತಿಳಿಸುವೆನೆಂದು ಭೂದೇವಿ ಹೊರಟಳು. ಮೇರುಪರ್ವತದ ಸಮೀಪದಲ್ಲಿ ವೀರಶೈವನಾದ ದೇವಲಮುನಿಯ ಆಶ್ರಮವನ್ನು ಕಂಡಳು (3–2) ಅದು ಶೈವಸಾಮ್ರಾಜ್ಯದಂತಿತ್ತು (3–29).

ಭೂದೇವಿಯು ದೇವಲನಿಗೆ ತನ್ನ ಬವಣೆಯನ್ನು ಹೇಳಿಕೊಳ್ಳುವಳು. ಆಗ ಆ ಋಷಿಯು "ಆದಿರುದ್ರಲೀಲೆ: ಕೃತಯುಗದಲ್ಲಿ ನಂದಿಕೇಶ್ವರ ರೂಪ, ತ್ರೇತೆಯಲ್ಲಿ ದೇವಾಂಗಗಣ ರೂಪ, ದ್ವಾಪರದಲ್ಲಿ ಘಂಟಾಕರ್ಣರೂಪ, ಆಮೇಲೆ ಧರ್ಮಸ್ವರೂಪವಾದ ವೃಷಭಾವತಾರವಾಯ್ತು. ಈ ವೃಷಭನೊಡನೆ ದೇವತೆಗಳು "ಸಂಪಾದಿಸಲು" (=ಚರ್ಚಿಸಲು) ಮುಳಿದ ಮುನಿಸಿಂದ ಭೂಲೋಕಕ್ಕೆ ಈ ಉಪಹತಿಯಾಗಿದೆ" ಎಂದನು (3–37).

"ಹಿಂದೆ, ಧರ್ಮವು ವೃಷಭಾಕಾರವನ್ನು ತಳೆಯಲು, ಅದರ ಮೇಲೆ ಶಿವ ಕುಳಿತು ಕರ್ಮವನ್ನು ತುಳಿಸಿದ (3–38), ಅದೇ ವೃಷಭನು ಈಗ ಧರ್ಮರೂಪನ್ನು ಬಿಟ್ಟು

ಅಮೃತಶೀಕರ ಶೈಲ ಮಧ್ಯದಲ್ಲಿರುವನು. ಅವನಲ್ಲಿಗೆ ಹೋಗಿ ಪ್ರಾರ್ಥಿಸಿ ಭೂಮಿಗೆ ಅವನನ್ನು ಕರೆತಂದರೆ–ಎಲ್ಲವೂ ಸರಿಹೋಗುವುದು" ಎಂದು ದೇವಲನು ಹೇಳುವನು ಭೂದೇವಿಗೆ (3 = 38–40).

ಅದೇ ರೀತಿ ಭೂದೇವಿ ವೃಷಭನಲ್ಲಿಗೆ ಬಂದು ಬೇಡಿ, ಪ್ರಸನ್ನನಾಗುವಂತೆ ಮಾಡಿ, ದೇವಲ ಹೇಳಿಕೊಟ್ಟ, ವೃಷಭಾಂಕಮಾಲೆಯನ್ನು ಪಠಿಸುತ್ತ ವೃಷಭನನ್ನು ಭೂಮಿಗೆ ಬಿಜಯಂಗೈಸಿ ತರುವಳು (3–41). ಇಳಿದು ಬಂದ ವೃಷಭ ಅಲ್ಲಿಂದ ದಕ್ಷಿಣಾಭಿಮುಖವಾಗಿ ಹೊರಟ (3–44).

ಕೃಷ್ಣವೇಣಿ ಮಲಪ್ರಹರಿಗಳ ದೆಶೆಯೊಳಾನಂದದಿಂದಿದ್ದು, ದಕ್ಷಿಣಕ್ಕೆ ತಿರುಗಿ ಏಕಚಕ್ರ–ದ್ವಿಚಕ್ರಪುರ–ಪಗರಟಿಗೆ–ಬಲಿಗ್ರಾಮ ಎಂದು ಯುಗಭೇದದಿಂದ ನಾಮಭೇದವನ್ನು ಹೊಂದಿದ ಬಲಿಗ್ರಾಮ (= ಬಳ್ಳಿಗಾವಿ)ಕ್ಕೆ ಬಂದು ನೆಲೆನಿಂತನು (3–47).

ಇತ್ತ ದೇವತಾಧೀಶನಾದ ಇಂದ್ರನು ಬೃಹಸ್ಪತಿಯನ್ನು ಕರೆದು "ವೃಷಭನನ್ನು ಕೈಲಾಸಕ್ಕೆ ಕರೆತರಲು ಏನು ಉಪಾಯ"ವೆಂದು ಕೇಳಲು, "ದೇವಾಂಗ–ಶೂನ್ಯಕಾಯ–ಘಂಟಾಕರ್ಣರಾದವನಿಗೆ "ಮಹಾಕಾಯ"ನು ಕರುಣಿಸಿದರೆ ಆದೀತು ಎಂದನು (4–3).

ಇಂದ್ರನು ಮಹಾಕಾಯನನ್ನು ಆಹ್ವಾನಿಸಿದ. ಅವನು "ತ್ರಿಪುರದಹನದಲ್ಲಿ ಪಾತ್ರವಹಿಸಿದ ವೃಷಭನ ಮಹಾತ್ಮೆಯನ್ನು ಹೇಳಿದ–ಶಿವನು ಕುಳಿತ ರಥವು ಪಾತಾಳಪರಿಯಂತ ಇಳಿಯಲು ಅದನ್ನು ಉದ್ಧರಿಸಿದವನು ಈ ವೃಷಭ. ಅವನೊಡನೆ ಜಗಳವಾಡಿದವರುಂಟೇ" ಎಂದು ಎಚ್ಚರಿಕೆಯ ಬುದ್ಧಿವಾದ ಹೇಳಿದ ಇಂದ್ರನಿಗೆ (4 = 4–5).

ಆಗ ಇಂದ್ರನು ಮಹಾಕಾಯನಿಗೆ ದೇವತೆಗಳೊಳಗೆ ಒಬ್ಬನಾದ ಅನಿಮಿಷನನ್ನು ತೋರಿಸಿ ಈತನ ಚೇಷ್ಟೆಯಿಂದ ಈ ಪಾಡಾಯಿತು ಎಂದು ಸ್ಪಷ್ಟಪಡಿಸುವನು (4–6).

ಆಗ ಮಹಾಕಾಯನು, "ವೃಷಭನಿಗೆ ಅಮೃತಸಂಜೀವಿನಿಯನ್ನು ಕೊಡುವ ಪ್ರಾಣಲಿಂಗ ಉಂಟು. ಅದನ್ನು ಭಕ್ತಿಭಾವದಿಂದ ಪಡೆದರೆ ಆ ವೃಷಭನು ಕೈಲಾಸಕ್ಕೆ ಬರುವನು (4–8)–ಎಂದು ಹೇಳಿಕೊಟ್ಟ.

ಅದೇ ಪ್ರಕಾರ ಶಿವಾರ್ಚಕರ ಉದರದಲ್ಲಿ ಅನಿಮಿಷನು (4–9), ಪಟ್ಟದ ಕಲ್ಲಿನಲ್ಲಿ ಹುಟ್ಟಿದ (4–10).

ಆ ಪಟ್ಟದ ಕಲ್ಲಿನಲ್ಲಿ ಚಾಳುಕ್ಯರಾಳುತ್ತಿರುವಾಗ ಒಬ್ಬ ಧನಿಕವಣಿಜ "ತ್ರೈಲೋಕ್ಯ ಚೂಡೇಶ" ಎಂಬವನಿದ್ದ. ಅವನ ಹೆಂಡತಿ ಮಹಲ್ಲೇಖೆ, ಅವರ ಹೊಟ್ಟೆಯಲ್ಲಿ "ಅನಿಮಿಷ"ನು "ವಸುದೀಪ್ಯ" ಎಂಬ ಹೆಸರಿನಿಂದ ಹುಟ್ಟಿದ (4–12).

ಅವನಿಗೆ ವಾಣಿ "ವಹಿ"ಯನ್ನು ಬರೆಯುವಳು. ಶಿವಜ್ಞಾನದೀಕ್ಷೆಯಾದ ಮೇಲೆ (4–19), ಅವನೊಂದು ದಿನ ಓಲಗಕೊಟ್ಟಿದ್ದಾಗ–ಚಾರರು ಬಂದು ಅಪೂರ್ವ ಅಶ್ವಗಳು ಮಾರಾಟಕ್ಕೆ ಬಂದಿರುವುವೆಂದೂ, ಅವುಗಳಲ್ಲಿ "ಕ್ರತುಜವ" ಎಂಬುದು ಶ್ರೇಷ್ಠವೆಂದೂ ಹೇಳುವರು (4–20). ಅದರ ಮೇಲೆ ಕುಳಿತು ದೇಶಕೋಶಗಳನ್ನು ನೋಡಿಬರಲೆಂದು ವಸುದೀಪ್ಯನು ಹೊರಟನು. ಮಾರ್ಗ ಮಧ್ಯ ಒಂದು ಅಡವಿಗೆ ಬಂದು ಸೇರಿದಲ್ಲಿ (42–1), ಬೇಡರು ಬೇಟೆಯಾಡುತ್ತ ಬರಲು ಕುದುರೆಯು ಬೆಚ್ಚಿ ವಿಗಡಿಸಿತು (4–22). ವಸುದೀಪ್ಯನನ್ನು ಕೆಳಕ್ಕೆ ಕೆಡವಿ ತಾನೆಲ್ಲಿಗೋ ಓಡಿಹೋಯಿತು.

ಅವನಿಗೆ ಬಾಯಾರಿಕೆ, ಆದರೆ ಲಿಂಗದರ್ಶನವಾದಲ್ಲದೆ ನೀರು ಕುಡಿಯದ ವ್ರತ

ಹಿಡಿದಿದ್ದ. ಅವನಿಗೆ ಎಲ್ಲಿಯೂ ಲಿಂಗದರ್ಶನವಾಗಲಿಲ್ಲ. ಹಲುಬುತ್ತ ಬರುತ್ತಿರುವಾಗ ಬಲಿಗ್ರಾಮ (ಬಳ್ಳಿಗಾವಿ)ದ ಬಳಿಯಲ್ಲಿ ವೃಷಭನು ಕಾಣಿಸಿದ. ಬಳಿ ಬಂದು ನೋಡುತ್ತಾನೆ... ಅದರ ಮೇಲೆ ಲಿಂಗ ಮುದ್ರೆಯೂ ಇರಲಿಲ್ಲ–ನಿರಾಶೆಯಾಯಿತು (4–27). ಇನ್ನೇಕೆ ಈ ದೇಹದ ಮೇಲಣಾಶೆ ಎಂದು ಅವನು ಹತಾಶನಾದುದನ್ನು ಆ ವೃಷಭನು ಕಂಡು (4–30) ಅವನ ಲಿಂಗದರ್ಶನನೇಮವನ್ನು ಕೇಳಿ ಕರುಣಿಸಿ, ತನ್ನ "ಸಂಜೀವನ ಅಮೃತಾಂಗದ ಆತ್ಮಜ್ಯೋತಿನಿಷ್ಠೆಯ ನಿಧಾನ ಜಿಹ್ವಾಗ್ರದಲ್ಲಿ ಲಿಂಗವನ್ನು ನಿಲಿಸಿ" ವಸುದೀಪ್ಯನಿಗೆ ವೃಷಭನು ತೋರಿಸಿದನು (4–31). ಆಗ ವಸುದೀಪ್ಯನು ಮುಖವರಳಿ ತನ್ನ ಬೊಗಸೆಗೈಯನ್ನು ಚಾಚಿ ವೃಷಭನ ಮುಂದೆ ಒಡ್ಡಿ "ನಾನು ಲಿಂಗಪ್ರಾಣಿ, ದರ್ಶನವಾಯಿತು, ನೀನು ನನ್ನನ್ನು ರಕ್ಷಿಸುವುದಾದರೆ ನನಗೆ ಆ ಲಿಂಗಸ್ಪರ್ಶನ ಒದಗುವಂತ ಕರುಣಿಸು" ಎಂದನು. ಕೃಪಾಮೂರ್ತಿಯಾದ ವೃಷಭನು ಅವನ ಕೈಯಲ್ಲಿ ಆ ಅಮೃತಲಿಂಗವನ್ನು ನಿಕ್ಷೇಪಿಸಿದನು (4–32).

ಆ ಲಿಂಗದರ್ಶನಲೋಲುಪ್ತನಾದ ವಸುದೀಪ್ಯನಿಗೆ ಜಾತಿಸ್ಮರಣೆಯಾಗಿ, ಲಿಂಗಪ್ರಾಣಿಯಾಗಿ, ಅದನ್ನೇ ನಿಮಿಷಾರ್ಧವೂ ಬಿಡದೆ ನಟ್ಟು ನೋಡುತ್ತಿದ್ದುದರಿಂದ ಅವನೆ "ಅನಿಮಿಷ"ನೆಂದು ಪ್ರಖ್ಯಾತನಾದ. ಸಮಾಧಿಸ್ಥಿತಿಯಲ್ಲಿದ್ದ ಅವನನ್ನು ಅವನ ಆಪ್ತರು ಕಂಡು "ಶಿಲಾತಲಂಗೊಳಿಸಿ, ಸೂಕ್ಷ್ಮಾಲಯಂಗಟ್ಟಿ, ಮಣ್ಮುಚ್ಚಿದರು". ಅನಿಮಿಷನು ಅಲ್ಲಿಯೇ ಧ್ಯಾನಸಮಾಧಿಯಲ್ಲಿ ತನ್ಮಯನಾಗಿದ್ದನು (4–33).

ಅಂತರ್ಧನವನ್ನು ಅನ್ಯಕ್ಷೇತ್ರದಲ್ಲಿ ನಿಕ್ಷೇಪಿಸಿ, ಅಂತದಱ ಹೊಲಬುದಪ್ಪಿರ್ದ ಭಾವದ ಸೂತ್ರದೆಂತ್ರದಡೆಯಜೆಯದ ಆರ್ತದೊಳು ಚೂಡಾಮಣಿಯನಱಸಿ ಬಪ್ಪಾತ್ಮರೂಪದಂತು ಲಿಂಗ ಪ್ರಾಣಿಯಾದ ಬಸವ ಬರೆ–ಶಿವನು ಕೂರ್ತು ಅದಂ ತಿಳಿದುಕೊಳ್ಳ (=ಕೊಳ್ವು] ದಂಜನಸಿದ್ಧಿ ಜಂಗಮ–ಮುಖಾಂತರವೆನಲು–ವೃಷಭ ಬಸವನಹ ತಾತ್ಪರ್ಯಕೊಗೆದ ಕಥನಾರ್ಥ ವಚನ: [ಶಿ. ಪ್ರ. ಮ. ಶೂ. ವಚನ=] ಚೆನ್ನಬಸವದೇವರ ಸಂಪಾದನೆಯ ವಚನ No. 242, 900, 910.

"ಸೋಮಶೇಖರನ ಕರುಣದ ಕಳಾಪ್ರಕೃತಿ ತಾ ನೇಮಮಂ ಕೈಕೊಂಡು ಒಂದೊಂದು ಬುದ್ಧಿ ಯುಪಸಾಮದಿಂದ ಎನ್ನ ಲಿಂಗವನೊಯ್ದನು" ಎಂದುಕೊಳ್ಳುತ್ತ ವೃಷಭನು ಕೈಲಾಸಕ್ಕೆ ಬಂದ (4–35).

ಕೈಲಾಸದ ಬಾಗಿಲಲ್ಲಿ ಲಿಂಗವಿಲ್ಲದೆ [ಬರುಬನಾಗಿ] ಬಂದು ನಿಂತಿದ್ದ ವೃಷಭನನ್ನು ಮಹಕಾಳ ರುದ್ರ ಎಂಬ ದ್ವಾರಪಾಲಕ ವಿಚಾರಿಸಿದಾಗ, "ನಾನು ಮರ್ತ್ಯಕ್ಕೆ ಕಾರಣಾಂತರ ಹೋಗಿ ಬಾರದುದನ್ನು ಕಂಡು, ಶಿವನೇ ಬೇರೊಂದು ರೂಪಾಗಿ ಅಲ್ಲಿಗೆ ಬಂದು ನನ್ನ ಲಿಂಗವನ್ನು ಕೊಂಡೊಯ್ಯಲು, ಒಡನೆಯೇ ನಾನೂ ಬಂದೆ" ಎಂದನು (4–36). ಲಿಂಗವಿರಹಿತನಾದ ಅವನನ್ನು ದ್ವಾರಪಾಲಕರು ನೋಡಲೊಲ್ಲದೆ ತಮ್ಮ ಅಂಗರಕ್ಷಕರಾದ ಸಿಂಗಕೇಶ–ದ್ರವಿಡರೆಂಬವರಿಗೆ ನೇಮಿಸಿ ಮುಖತಿರುವಿದರು. ಆ ಅಂಗರಕ್ಷಕರು ಅವನನ್ನು ತಡೆದು ಭಂಗಿಸಿದರು–ನೀನು ಪ್ರಾಣಲಿಂಗವನ್ನು ನೀಗಿದ ಮಹಾಪಾತಕಿ ಪರಶಿವನ ಮಹಾಮನೆಯ ಬಾಗಿಲಿಗೆ ಬರದಿರು" ಎಂದು (4–38). ಇದನ್ನು ಶಿವನು ಕೇವಲಜ್ಞಾನದಿಂದ ಅರಿತು ಓಡಿಬಂದು "ಏವುದೈ ನಿಮಗೆ ಸಂವಾದ? ವೃಷಭಂಗೇಕೆ ಲಿಂಗ? ತಾ ಲಿಂಗ" ಎಂದು ಮಧ್ಯೆ ಪ್ರವೇಶಿಸಿದ (4–39).

ಆದರೆ ದ್ವಾರಪಾಲಕರಾಗಲಿ ಅಂಗರಕ್ಷಕರಾಗಲಿ ಶಿವನ ಮಾತನ್ನೂ ಮನ್ನಿಸದ "ಲಿಂಗಬಾಹಿರನನ್ನು ಈ ತೆಜದೊಳಗೆ ಪುಗಲೀಯೆವು" ಎಂದು ಹಠ ಹಿಡಿಯುವರು. ಶಿವನು, "ನೀನಿಳೆಯೊಳವತರಿಸಿ ನಿಂದೆಯ ನೀಗಿ ಬಾ ಹೋಗು" ಎಂದು ಭೂಮಿಗೆ ವೃಷಭನನ್ನು ಕಳಿಸಿಕೊಡುವನು (4–42).

"ಮರ್ತ್ಯದೊಳು ನೀನಿರ್ದ ನೆಲೆಯ ಕೈಲಾಸವಹುದು ಈ ಪ್ರಮಥರೀ ರುದ್ರಲೋಕ ಸಹಿತಾನೆ ಬಹೆನು. ಅಲಸದಂತೀಗಲೇಳ್ನೂಱೆಪ್ಪತ್ತಮರಗಣ ಕುಲಸಹಿತ ನಡೆ" ಎನ್ನುತ್ತ ಅವನಿಗೆ ಪಂಚಪರುಷವನ್ನು ಪ್ರದಾನ ಮಾಡುವನು (4–46).

ಆಗ ವೃಷಭನು ಶಿವನನ್ನು ಕುರಿತು "ಆದಡಾ ಮಹಾಘನಲಿಂಗ ಬಂದೆನ್ನ ಕೈಸಾರ್ವುಪಾಯವೇನೀ ಭವದ ಬಂಧನಿವೃತ್ತಿ ಎಂತಹುದದ ನಿರೂಪಿಸು ಎನ್ನಲು ಶಿವನ ಉತ್ತರ: "ನಿರ್ದೇಹನೊರ್ವ ಬಂದು ನಿಂದುದೇ ಕುಱುಹಾತನೇ ನಾನು, ನಿನ್ನಿಂದ ಹಿಂದ್ದೋದ ತಾರಕಬ್ರಹ್ಮರೂಪದ ಲಿಂಗ ಬಂದಪುದು, ಬಳಿಕವೀ ಲೋಕವು" ಎಂದು (4–47).

[ಇಲ್ಲಿಂದ ಮುಂದೆ ನಿರ್ಮಾಯನ ಕಥೆ ಬರುವುದು. ಶಿ.ತ.ಚಿಂ.ಯಲ್ಲಿ (29=34–41).]

ಹಿಂದೆ ಲೀಲಾಪ್ರಕೃತಿಯಿಂದ ಗಣೇಶಾವತಾರ ಬಂದರೆ ನಾನು ನೀನೆಯಾಗಿರೆನೆ? ಏಕೆ ಈ ವೃಥಾ ಸಂದೇಹ? ಅಭವಗೆ ಭವಮುಂಟೆ? ನೀನಾನೆಂಬ ಮಱೆಯಲಿಹ ಮಾತಿ–ದೇಕೆ? (4–48) ಎಂದು ಶಿವನು ಸಂತೈಸುವನು.

(ಮಾದೇವಸ್ವರೂಪಂಗೆ ಕುಚಿತಕೊಱತೆಯ ಕುಂದು ನಿಂದೆವೊರಿಸಲ್ಕೆ ಜನನ ವೈಕಾರವಂ ತೊಡರ್ಚಿದ ತೊಡಕಿದೇನು?" ಎಂಬ ಆಕ್ಷೇಪಣೆಯನ್ನು ಸಿಂಗಿರಾಜನು "ಶಿವನ ಲೀಲಾರೂಪು ಜನಿತಜಡನೇ" ಎಂದು ತಳ್ಳಿಹಾಕುವನು (4–49).

ಆದರೆ ಗುಮ್ಮಳಾಪುರದ ಸಿದ್ಧಲಿಂಗನು ಬಸವಾದಿ ಪ್ರಮಥರು ಜಗದ್ಧಿತಾರ್ಥವಾಗಿ ಅವತರಿಸಿದವರೇ ಹೊರತು ಶಾಪಹತರಾಗಿ ಜನಿಸಿದವರಲ್ಲವೆನ್ನುವನು. ಅದನ್ನು ಸಿದ್ಧವೀರನು ಅನುಮೋದಿಸಿರುವನು.)

3. ಇವನನ್ನು ಶಿವಗಣಪ್ರಸಾದಿಗಿಂತ ಪೂರ್ವದವನೆನ್ನಲು ಯಾವ ಆಧಾರವೂ ಇಲ್ಲ. ಈ ಚಾಮರಸನು ಪ್ರೌಢದೇವರಾಯನ (1416–1446) ಸಮಕಾಲೀನನೆಂದೂ ಅಂದಿನ ನೂರೊಂದು ವಿರಕ್ತರಲ್ಲಿ ಒಬ್ಬನೆಂದೂ ಹೇಳಿರುವ ತೀರ ಪೌರಾಣಿಕ ಕವಿಯಾದ ಅದ್ರೀಶ (ಸು. 1580)ನ ಹೇಳಿಕೆಯನ್ನು ಅಲ್ಲಗಳೆಯಲು ಸಾಕ್ಷ್ಯಾಧಾರಗಳೇನಾದರೂ ದೊರೆತುದಾದರೆ ಶೂನ್ಯಸಂಪಾದನೆಯ (ಮತ್ತು ಅದನ್ನೇ ಹೋಲುವ ಪ್ರಭುಲಿಂಗಲೀಲೆಯ) ಕಥೆಯ ಪರಿವರ್ತನೆಯ ಸೂತ್ರದ ಆಧಾರದಿಂದ ಚಾಮರಸನನ್ನು ಹಲಗೆಯಾರ್ಯನು ಗತಿಸಿಹೋದ ಮೇಲಣ ಮತ್ತು ಗುಮ್ಮಳಾಪುರದ ಸಿದ್ಧಲಿಂಗನಿಗಿಂತ ಹಿಂದಣ ಕಾಲಾವಧಿಯಲ್ಲಿ ನಿಲ್ಲಿಸಬಹುದು. ಇದಕ್ಕೆ ಇಂಬುಕೊಡುವ ಹಲವು ಅಂಶಗಳು ಪ್ರಭುಲಿಂಗಲೀಲೆಯ ಕಥೆಯ ಶಯ್ಯೆಯಲ್ಲಿ ಹುದುಗಿವೆ:

   1. ಪ್ರಭುದೇವ–ಬಸವಣ್ಣ–ಅಕ್ಕಮಹಾದೇವಿ ಮುಂತಾದವರು ಶಾಪಹತರಾಗಿ ಭೂಮಿಗೆ ಅವತರಿಸಿದವರಲ್ಲ.
   2. ಪ್ರಭುದೇವನಿಗಾಗಲಿ, ಅಕ್ಕಮಹಾದೇವಿಗಾಗಲಿ ಮದುವೆಯಾಗಿರಲಿಲ್ಲ.

3. ಗೊಗ್ಗಯ್ಯ ಮತ್ತು ಗೋರಕ್ಷರ ಪ್ರಸಂಗಗಳನ್ನು ಬಿಟ್ಟು, ನುಲಿಯ ಚಂದಯ್ಯ ಮುಂತಾದ ಯಾವ ಅಧಿಕ ಸಂಪಾದನೆಗಳೂ ಇಲ್ಲ. (ಗುಮ್ಮಳಾಪುರದ ಸಿದ್ಧಲಿಂಗನು ಪ್ರಭುಲಿಂಗಲೀಲೆಯ ಅನುಕರಣೆಯಿಂದಲೇ ಗೋರಕ್ಷ ಪ್ರಸಂಗವನ್ನು ಒಂದು ಸಂಪಾದನೆಯಾಗಿ ಬೆಳೆಸಿ ತನ್ನ ಪರಿಷ್ಕರಣದಲ್ಲಿ ಸೇರಿಸಿದ್ದಾನೆ. ಮತ್ತು ಚಾಮರಸನು ಹಲಗೆಯಾರ್ಯನ ಪ್ರಭಾವಕ್ಕೆ ಒಳಗಾಗಿದ್ದಾನೆ. ಮರುಳುಶಂಕರದೇವರ ಪ್ರಸಂಗದಲ್ಲಿ. (ಹೋಲಿಸಿ: ಹ–900 ಮತ್ತು ಪ್ರ.ಲೀ. 15–6, ಆದರೆ ಚಾಮರಸನು ಶಿವಗಣಪ್ರಸಾದಿ–ಹಲಗೆಯಾರ್ಯರಿಂದ ಭಿನ್ನವಾಗಿ ಹೋದ ಮೊದಲಿಗನೆನ್ನುವುದನ್ನು ಮರೆಯಬಾರದು. ಈ ಚಾಮರಸನ ಪ್ರಭಾವ ಹಲವಂಶಗಳಲ್ಲಿ ಸಿದ್ಧಲಿಂಗ ಮತ್ತು ಸಿದ್ಧವೀರರ ಮೇಲೆ ಬಿದ್ದಿದೆ.)
4. ಮೊದಲೆರಡು ಶೂನ್ಯಸಂಪಾದನೆಗಳಲ್ಲಿ ಕಾಣದ ಗೊಗ್ಗಯ್ಯನ ಪ್ರಸಂಗ ಇಲ್ಲಿದ್ದು ಅದನ್ನು ಮುಂದಿನ ಶೂನ್ಯಸಂಪಾದನಕಾರರು ಅಳವಡಿಸಿಕೊಂಡಿರುವರು.
5. ಕೊನೆಯ ಎರಡು ಶೂನ್ಯಸಂಪಾದನೆಗಳಲ್ಲಿ ಮಾತ್ರ ಕಂಡುಬರುವ ಬಿಜ್ಜಳನ ಕೊಲೆಗೆ ಕಾರಣವೆನ್ನಲಾದ ಹರಳಯ್ಯ ಮಧುವಯ್ಯರ ಘಟನೆ ಇಲ್ಲಿಲ್ಲ.

4. ಶಿವಗಣಪ್ರಸಾದಿ ಮಹಾದೇವಯ್ಯನ ಪ್ರಭುದೇವರ ಶೂನ್ಯಸಂಪಾದನೆಯಲ್ಲಿ ಜರಿಯಾಗಿ ಬಂದಿರುವ ಬಸವಣ್ಣನ ಜೀವನ ವೃತ್ತಾಂತ ಈ ಮುಂದಿನಂತಿದೆ:

ಸಿಂಗಿರಾಜ ಪುರಾಣದಲ್ಲಿರುವಂತೆ ವೃಷಭ–ಅನಿಮಿಷ ಪ್ರಸಂಗದಿಂದ–ಲಿಂಗವಿರಹಿತನಾಗಿ ಕೈಲಾಸಕ್ಕೆ ಬಂದ ವೃಷಭನನ್ನು ಶಿವನು ಕಂಡು ಕೋಪಿಸಿಕೊಂಡು "ಅನಿಮಿಷನಿಗೆ ಕೊಟ್ಟ ಲಿಂಗವನ್ನು ಮರಳಿ ಕೊಂಡು ಬಾ" ಎಂದು ಆಗ್ರಹದಿಂದ ಭೂಲೋಕಕ್ಕೆ ಕಳಿಸಿದನು. ಹೀಗೆ ಶಿವನಿಗೆ ವೃಷಭನನ್ನು ಕಳಿಸುವಲ್ಲಿ ಅವನಿಂದ ಮರ್ತ್ಯದಲ್ಲಿ ಶಿವಭಕ್ತಿ ಪ್ರಚಾರವಾಗಲಿ ಮತ್ತು ಶೈವಮತ ಪ್ರಬಲವಾಗಲಿ ಎಂಬ ಉದ್ದೇಶವೂ ಇತ್ತು. ಏಳುನೂರೆಪ್ಪತ್ತು ಅಮರಗಣಗಳೂ ವೃಷಭನ ಜೊತೆಗೂಡಿದರು.

ವೃಷಭನು ಭೂಲೋಕಕ್ಕೆ ಇಳಿದು, ಶೈವಾಗಮಾಚಾರ್ಯನಾದ ಮಂಡಗೆಯ ಮಾದಿರಾಜನ ಹೆಂಡತಿ ಮಾದಾಂಬಿಕೆಯ ಹೊಟ್ಟೆಯಲ್ಲಿ ಹುಟ್ಟಿ ಬಂದ. ಅವನಿಗೆ "ಬಸವಣ್ಣ" ಎಂದು ನಾಮಕರಣವಾಯಿತು. ಆ ಬಸವಣ್ಣನು ಕೂಡಲಸಂಗಮದೇವರಿಂದ ಉಪದೇಶವನ್ನು ಪಡೆದು ಸರ್ವಾಚಾರ ಸಂಪನ್ನನಾದ.

ಇತ್ತ ಬಸವಣ್ಣನ ಭಕ್ತಿ–ಜ್ಞಾನ–ವೈರಾಗ್ಯವನ್ನು ಒರೆಗೆ ಹಚ್ಚಿ ಪ್ರಕಾಶಕ್ಕೆ ತರಲೆಂದು ಕಲ್ಯಾಣದಲ್ಲಿ ಪರವಾದಿ ಬಿಜ್ಜಳ, ಅವನಿಗೆ ನೆರವಾಗಿ ಮಂಚಣ್ಣ ಮುಂತಾದ ಮುವ್ವತ್ತಾರು ಜನ ಕೊಂಡೆಯರು, ಇವರಿಂದ ಸಜ್ಜಾದ ಪರೀಕ್ಷಾಕ್ಷೇತ್ರ ಸಿದ್ಧವಾಯಿತು ಶಿವನ ಲೀಲೆಯಿಂದ.

ಅಂಗದ ಮೇಲೆ ಲಿಂಗ ಉಳ್ಳವರೆಲ್ಲರೂ ಸಂಗಮನಾಥ ಸ್ವರೂಪಿಗಳು–ಎಂಬುದೇ ಬಸವಣ್ಣನ ನಿಲವು. ಲಿಂಗ–ಜಂಗಮ ಯಾವುದೂ ಇಲ್ಲವೆಂಬುದೇ ಬಿಜ್ಜಳನ ವಾದ; ಬಸವಣ್ಣನ ಈ ಭಕ್ತಿ ಪಂಥ ಬಿಜ್ಜಳನಿಗೆ ಸರಿಬೀಳಲಿಲ್ಲ.

ಆ ಘಟ್ಟದಲ್ಲಿ ಒಂದು ಘಟನೆ ನಡೆಯಿತು. ಅದೊಂದು ಪವಾಡ: ಶಿವನು ಎಸೆದ ಒಂದು ಓಲೆಯ ಗರಿ–ಬಿಜ್ಜಳನು ಓಲಗಕೊಟ್ಟು ಕುಳಿತಿದ್ದಾಗ–ಅವನ ಸಿಂಹಾಸನದಲ್ಲೇ ಬಂದು ಬಿದ್ದಿತು. ಅದರಲ್ಲಿದ್ದುದು ಯಾವ ಲಿಪಿಯೋ? ಏನು ವಿಷಯವೋ? ಆಸ್ಥಾನದ

ಸೇನಬೋವರೊಬ್ಬರಿಗೂ ಅದರ ತಲೆ ಬಾಲ ತಿಳಿಯಲಿಲ್ಲ. ಅದನ್ನು ಓದಿದವನಿಗೆ ಆನೆ–ಸೇನೆ–ಕುದುರೆ–ಭಂಡಾರವನ್ನು ಕೊಟ್ಟು ಅವನನ್ನು ಅರವತ್ತಾರು ಕರಣಕ್ಕೆ ಅಧಿಪತಿಯನ್ನಾಗಿ ಮಾಡುವೆನೆಂದು ಬಿಜ್ಜಳ ಭಾಷೆ ಕೊಟ್ಟನು.

ಎಲ್ಲರೂ ಸುಮ್ಮನಿದ್ದ ಆ ನೀರವನಿಶ್ಚಲ ಸಭೆಯಲ್ಲಿ ಬಸವಣ್ಣನೆದ್ದು ಆ ಓಲೆಯನ್ನು ಹರನ ನಿರೂಪವೆಂದು ಬಗೆದು, ಶಿರದ ಮೇಲೆ ಹೊತ್ತು, "ಶಿವಶರಣು" ಎಂದು ಕೈಗೆತ್ತಿಗೊಂಡು ಓದಿ ಅದರಲ್ಲಿನ ಸೂಚನೆಯಂತೆ 60 ಕೋಟಿ ಹೊನ್ನಿದ್ದ ನಿಕ್ಷೇಪ ಒಂದನ್ನು ಅಗೆಸಿ ತೆಗೆಸಿ ಬಿಜ್ಜಳನಿಗೆ ಸಲ್ಲಿಸಿದ. ಒಡನೆಯೆ ಬಸವಣ್ಣನು ಶಿರಪ್ರಧಾನಭಂಡಾರಿಯಾಗಿ ನೇಮಕವಾದ.

ಆದರೂ ಬಸವಣ್ಣ ಬಿಜ್ಜಳರಿಗಿದ್ದ ತಾತ್ವಿಕ ಭಿನ್ನಾಭಿಪ್ರಾಯಗಳು ತಗ್ಗಲಿಲ್ಲ. ಶಿವಾಚಾರವನ್ನು ಬಿಜ್ಜಳನು ಅಲ್ಲಗಳೆದಾಗಲೆಲ್ಲ ಬಸವಣ್ಣನು ಅವನನ್ನು ಒಡಂಬಡಿಸಲು ಹಲವಾರು ಪವಾಡಗಳನ್ನು ಮೆರೆಯಬೇಕಾಯಿತು. (ಅವನು ಏನೇ ಅದ್ಭುತ ಪವಾಡಗಳನ್ನು ಮೆರೆದರೂ ಬಿಜ್ಜಳನನ್ನು ಒಡಂಬಡಿಸುವ ಪವಾಡವನ್ನು ಮೆರೆಯಲಾಗಲಿಲ್ಲ!)

ಜೊತೆಗೆ ಪ್ರಭುದೇವನ ಕೈಸೇರಿದ್ದ ತನ್ನ ಪ್ರಾಣಲಿಂಗವನ್ನು ಮರಳಿ ಪಡೆಯುವುದಕ್ಕಾಗಿ ಬಸವಣ್ಣ ಪರಿತಪಿಸುತ್ತಲೇ ಇದ್ದ. ಆ ಜಂಗಮಶ್ರೇಷ್ಠನು ಎಂದು ಬಂದಾನೋ ಎಂದು ದಾಸೋಹವನ್ನು ಹರಹಿಕೊಂಡು–ಮಣ್ಣನ್ನು ಚಾಲಿಸಿ ಚಿನ್ನವನ್ನು ತೆಗೆಯುವಂತೆ–ಕಣ್ಣಲ್ಲಿ ಪ್ರಾಣವಿಟ್ಟುಕೊಂಡಿದ್ದನು.

ಹೀಗಿರುವಲ್ಲಿ ಅವನ ಪುಣ್ಯದ ಫಲವಾಗಿ ಪ್ರಭುದೇವನು ಕಲ್ಯಾಣಕ್ಕೆ ಬಂದು ಬಸವಣ್ಣನ ಮನದ ಮಲಿನವನ್ನು ತೊಳೆದು ಶೂನ್ಯಸಿಂಹಾಸನದಲ್ಲಿ ಮೂರ್ತಿಗೊಂಡನು.

ಇನ್ನು "ಕಲಿಯುಗದಲ್ಲಿ ಮುಂದೆ ಇರಬಾರದು" ಎಂದು ಕಲ್ಯಾಣದ ಶಿವಶರಣರಿಗೆ ಆ ಪ್ರಭುದೇವನು ಸಾಮೂಹಿಕವಾಗಿ ಕರೆಯಿತ್ತ. ಅವನ ಅಪ್ಪಣೆಯ ಪ್ರಕಾರ ಬಸವಣ್ಣನು ಕೂಡಲ ಸಂಗಮದಲ್ಲಿ "ನಿಜವನ್ನು ಎಯ್ದಲು" ನಿಶ್ಚಯಿಸಿ, "ಜಗದೇವ ಮೊಲ್ಲೆಯ ಬೊಮ್ಮಣ್ಣಗಳ ಕೈಯಲ್ಲಿ ಮಡಿದಹನು ಬಿಜ್ಜಳನು" ಎಂದು ಮಮ್ಮಲಮರುಗುತ್ತ, ತನ್ನ ಮನೆಯಲ್ಲಿದ್ದುದನ್ನೆಲ್ಲ ಲಿಂಗ ಜಂಗಮಕ್ಕೆ ಸೂರೆಗೊಟ್ಟು ಕಪ್ಪಡಿಗೆ ಹೋಗಿ ಲಿಂಗೈಕ್ಯನಾದ.

5. ಶಿವಗಣಪ್ರಸಾದಿಯನ್ನು ಅನುಸರಿಸಿ ಚೆನ್ನಬಸವಣ್ಣನ ಒಂದು ವ್ಯಕ್ತಿಚಿತ್ರವನ್ನು ಈ ಮುಂದಿನಂತೆ ರೂಪಿಸಿಕೊಳ್ಳಬಹುದು:

ಒಕ್ಕುಮಿಕ್ಕ ಶೇಷಪ್ರಸಾದದಿಂದ ಚೆನ್ನಬಸವಣ್ಣನು ಭ್ರೂಣವಾಗಿ ತಾಯ ಹೊಟ್ಟೆಯಲ್ಲಿ ಇರುವಾಗಲೇ ಅವನಿಗೆ ಬಸವಣ್ಣನು ವಿಭೂತಿಪಟ್ಟವನ್ನು ಕಟ್ಟಿ, ಅನುಗ್ರಹಿಸಿ ಕಾಪಾಡಿದಂತೆ ಚೆನ್ನಬಸವಣ್ಣನ ಒಂದು ವಚನ (538)ದಿಂದಲೇ ವ್ಯಾವರ್ಣಿತವಾಗಿದೆ.

ಇವನು ವಯಸ್ಸಿನಲ್ಲಿ ಎಲ್ಲರಿಗೂ ಕಿರಿಯನಾದರೂ ಮಹಾಮೇಧಾವಿಯೆಂದು ಹಲವರು ಶರಣರು ಪ್ರಶಂಸೆಮಾಡಿರುವರು. ಶರೀರಧಾರಿಯಾಗಿದ್ದೂ ಇಷ್ಟು ದಿವ್ಯಜ್ಞಾನವನ್ನು ಪಡೆದಿರುವುದು. ಕಾಲಾಗ್ನಿರುದ್ರನಿಗೂ ಕಾಮಸಂಹಾರಿಗೂ ಸಾಧ್ಯವಿಲ್ಲವೆಂದಿರುವನು ಸಾಕ್ಷಾತ್ ಪ್ರಭುದೇವ (489).

ಇಂತೆಲ್ಲ ಜ್ಞಾನಸಂಪದ್ಯುಕ್ತವಾದರೂ ಚೆನ್ನಬಸವಣ್ಣನು ನಿರಹಂಕಾರಿ, ಅವನನ್ನು ಕಂಡು "ಮಹಾಜ್ಞಾನಕ್ಕೆ ನಿರಹಂಕಾರವೇ ಶೃಂಗಾರ" ಎಂದು ಮಡಿವಾಳಮಾಚಯ್ಯನು ತೃಪ್ತಿಯ ಉದ್ಗಾರವೆತ್ತಿರುವನು (585).

ಪ್ರಭುದೇವ–ಬಸವಣ್ಣ ಮುಂತಾದವರ ಪೂರ್ವಭವಾವಳಿಯನ್ನು ತಿಳಿಯಹೇಳುವಲ್ಲಿ ಚೆನ್ನಬಸವಣ್ಣನನ್ನು ಪ್ರವಾದಿಯನ್ನಾಗಿ ಶಿವಗಣಪ್ರಸಾದಿ ಬಳಸಿಕೊಂಡಿರುವುದಕ್ಕೆ ಅವನು ದಿವ್ಯ ಜ್ಞಾನಿಯಾಗಿದ್ದನೆಂಬ ಪ್ರತೀತಿಯೇ ಕಾರಣ.

ಮೇಲಾಗಿ ಇವನು ಪ್ರಾಣಲಿಂಗ ರಹಸ್ಯವನ್ನು ಬಲ್ಲವನಾದುದರಿಂದಲೇ, ಸಾಕ್ಷಾತ್ ಬಸವಣ್ಣನಿಗೇ ಪ್ರಾಣಲಿಂಗ ಸಂಬಂಧವಾಗಿ ಉಪದೇಶಮಾಡಿದಂತೆ ನಿರೂಪಿಸಲಾಗಿದೆ: ಕಳೆದುಕೊಂಡ ಪ್ರಾಣಲಿಂಗವನ್ನು ಪಡೆಯುವುದೆಂತು ಎಂದು ಬಸವಣ್ಣನು ಚಿಂತಿಸುತ್ತಿದ್ದಾಗ ಶಿವನು ತಾನೇ ಅದನ್ನು ಬಸವಣ್ಣನಿಗೆ ಬೋಧಿಸಲೆಂದು ನಾಗಾಂಬಿಕೆಯ ಗರ್ಭದಲ್ಲಿ ಚೆನ್ನಬಸವಣ್ಣನಾಗಿ ಉದ್ಭವಿಸಿ ಬಂದನೆಂಬುದೇ ಶಿವಗಣಪ್ರಸಾದಿ ಮುಂತಾದವರ ನಂಬಿಕೆ.

6. ಇದಕ್ಕೆ ಕಾರಣ ಆ ವೇಳೆಗೆ ರಚಿತವಾಗಿದ್ದ ಚಾಮರಸನ ಪ್ರಭುಲಿಂಗಲೀಲೆ. ಪ್ರಭುದೇವರ ಕಥಾಸಂಪ್ರದಾಯದಲ್ಲಿ ಮೂರು ಪ್ರಕಾರಗಳಿವೆ: ಮೊದಲನೆಯದು ಹರಿಹರನಿಂದ, ಎರಡನೆಯದು ಸಿಂಗಿರಾಜನಿಂದ, ಮೂರನೆಯದು ಚಾಮರಸನಿಂದ ಪ್ರವರ್ತಿತ. ಕೊನೆಯದು ಪಾಲ್ಕುರಿಕೆ ಸೋಮನಾಥನಲ್ಲೇ ಪ್ರಚ್ಛನ್ನವಾಗಿತ್ತು. ಅದನ್ನು ಸ್ಫುಟಗೊಳಿಸಿದವನು ಚಾಮರಸ ಎನ್ನಲೂಬಹುದು. ಹರಿಹರನ ಮತ್ತು ಸಿಂಗಿರಾಜನ ಸಂಪ್ರದಾಯಗಳನ್ನು ಮೇಳನಗೊಳಿಸಿ ಬಳಸಿದವರು ಶಿವಗಣಪ್ರಸಾದಿ ಮತ್ತು ಹಲಗೆಯದೇವ; ಚಾಮರಸನನ್ನು ಬಳಸಿದವರು ಗುಮ್ಮಳಾಪುರದ ಸಿದ್ಧಲಿಂಗ ಮತ್ತು ಗೂಳೂರು ಸಿದ್ಧವೀರರು. ಅಂತೆಯೇ ಚಾಮರಸನ ಪ್ರಭುಲಿಂಗಲೀಲೆಯೂ ಶಿವಗಣಪ್ರಸಾದಿ ಮಹಾದೇವಯ್ಯ (ಮತ್ತು ಹಲಗೆಯದೇವ)ನ ವಿಚಾರಧಾರೆಯಿಂದ ಪ್ರಭಾವಿತವಾಗಿದೆಯೆಂಬುದೂ ಅಷ್ಟೇ ಸತ್ಯ.

7. (ಶಿಗು ಗೂ) ನಮಗೆ ನೀನಳವಡಿಸಿ (ಹ)

8. ಶಿ (ಶಿ ಹ ಗು) ಕರಣಂಗಳಿಗೆ (ಗೂ)

9. (ಶಿ ಗು ಗೂ) ರ್ಥವಯ್ಯ (ಹ).

10. (ಶಿಗೂ) ಕ್ಷುತ್ತಿಲ್ಲವಾಗಿ (ಹ ಗು)

11. (ಶಿ ಗು ಗೂ) ಮಾಡಲಿಲ್ಲವಯ್ಯ (ಹ)

12. (ಶಿ) ಸೀರೆಯನು ಉಡುಗೊರೆಯನೆನಗೆ (ಹ) ಸೀರೆಯ ನನಗೆ ಉಡುಗೊರೆಯ (ಗು) (ಗೂ)

13. (ಶಿ ಗು ಗೂ) ಪ್ರಭುದೇವರ (ಹ)